Lahari COMMUNIQUE
Its Unique!

Volume : 1
Aug 2010
Part 3
Price : Rs. 2

# Uncertainty ends, CJ transferred

Friday, the 31st July brought an end to months' long uncertainty over the Chief Justiceship of Karnataka High Court with transfer of J| P.D.Dinakaran to Sikkim High Court and transfer of J| Jagadish Singh Khehar to Karnataka from Uttarakhand High Court. See page 4 for a brief profile of J| J.S.Khehar. Visit page 1 of Samvada for more news.

## Direct Tax Code to replace Income Tax Act

The Union Finance Minster, Pranab Muherjee has said that from next fiscal year, Direct Tax Code (DTC) will replace the existing Income Tax Act.

Speaking at the 150th anniversary of the income tax in India the FM said that the proposed Direct Taxes Code (DTC) will provide a taxation regime which is simple and broad based and in turn will lead to lower tax rates, better tax compliance and reduced litigation.He said a bill on the code will be tabled in the current session of Parliament.

The finance minister on the occasion said that the annual growth of direct taxes has averaged about 24% in the last five years despite two low growth years in 2009-09 and 2009-10 due to the slowdown in the global economy.

## We need to inculcate settlement culture : CJI

Inaugurating a seminar on 'national Conference on Mediation'. the Chief Justice of India, H.S.Kapadia lamented that the country does not have a settlement culture.

The CJI said, "We do not have a settlement culture. Mediation and arbitration as a mode of dispute settlement is popular and successful in other countries."

CJI said that the Commercial Courts Bill is a legislation aimed at speeding up court proceedings and dispose of the number of pending court cases that recently touched the 3 crore plus mark.

## Bills passed without debate

The law makers in Karnataka in recently concluded session of the Assembly passed as many as nine Bills without any debate.

The list includes two controversial bill relating to regularization of unauthorised construction in the state (Akrama-Sakram) and the law banning cow slaughter.

The opposition stayed away from the business of the house opposing the stand of the Government on the issue of mining in the state. The Government made use of the occasion to push through these bills.

The Bill banning cow slaughter replaces the existing Karnataka Prevention of Cow Slaughter and Cattle Preservation Act 1964.

The Council also passed the Karnataka Panchayat Raj (Amendment) Bill, 2010 which offers 50 per cent reservation for women in gram panchayats, taluk panchayats and zilla panchayats, the Karnataka Irrigation and Certain Law (Amendment) Bill and the BWSSB (Amendment) Bill.

## PM pushes Goods and Service Tax

Goods and Service Tax (GST), is being pushed forward by none other than the Prime Minister of Inida, Manmohan Singh in a bid to persuade States to accept the new tax regime. The PM on 24th July while addressing National Development Council urged member states to accept the new tax regime which helps more revenue generation.

The Government of India, to persuade States to accept GST has proposed a dual rate of GST for goods in initial two years. The dual GST will have two components— Central GST and State GST and revenue will be equally divided between the Center and states, while both states and center will levy Service Tax at the same rate.

The GST includes Central Excise and Service Taxes at the central level and Value Added Tax (VAT) and other local taxes at the state level.

## Cabinet approves higher retirement age of HC Judges

The Union Cabinet which met on 30th July has approved a bill to amend Constitution to enhance retirement age of High Court Judges.

The present retirement age of HC Judges is 62. The Government is seeking to enhance it to 65 years in order to extend their service span. Chapter V of the Constitution fixes the age limit of High Court Judges at 62 years and that of Supreme Court Judges at 65. The move of the Government will benefit around 630 Judges in various High Courts across the country.

## Fresh guidelines for Insurance Companies IPOs

The Insurance Development Regulatory Authority (IRDA) has finalised fresh guidelines for Initial Public Offer (IPO) of shares of Insurance Companies. These guidelines have now been referred to securities market watch dog, Securities and Exchange Board of India (SEBI) for SEBI's approval. This has been revealed by IRDA chairman, Harinarayana to PTI in an interview.

Valuation of shares and premium is a major issue between company making IPO and SEBI. The IRDA therefore, has decided to play it safe and has consulted Institute of Actuaries on valuation norms.

The IRDA is likely to come out with a draft guidelines for public comments before issuing the final notification.

As far as disclosure norms are concerned, the IRDA has already notified the same. Accordingly, insurance companies making IPOs are required to provide details about the operations and balance sheets on quarterly and yearly bases.

*"The Income Tax Department is filing appeals in a routine manner without careful thought and examination leading to be the biggest litigent in Government", said Central Finance Minster Pranab Mukherji.*

*SC: High Courts top ensure receipt of Police Verification Reports by authority concerned before giving order of appointment or posting in State Judicial Service.*

*Prabhakar Joshi, a visually challenged 84 years old Sanskrit scholar has composed the first ever biography of the architect of Indian constitution Dr B.R. Ambedkar in Sanskrit verse.*

*"The accomplice to the crime of corruption is frequently our own indifference"* - **Bess Myerson**

Editor Speaks

# Strengthen the Lokayukta institution

Lokayukta is an institution created by the collective will of the people to fight corruption within the Government. By any logic, the institution should have necessary powers to fight corruption. The Government of the day has no authority to weaken the institution. In fact it is the moral duty of the Government to reinforce from time to time organisations created by it.

The present state of this institution is pathetic. It has not been given necessary staff to enquire into and investigate cases of corruption. The Lokayukta can not suo moto register cases even if such instances come to Lokayukta's knowledge. The Chief Minister, his ministerial colleagues, legislatures and senior bureaucrats such as Chief Secretary, Additional Secretary and Principal Secretary have been kept out of the net of the Lokayukta. The post of Upa Lokayukta was kept vacant for a long period resulting in piling up of cases. As if this is not enough to curtail the power of Lokayukta isntitution, the Government openly defies the recommendations of the Lokayukta against corrupt officials caught red handed. The instances of awarding such officers with plum posts are plenty. The recommendation of the Lokayukta to grant Courts to try exclusively corruption cases has been gathering dust since a long time.

It took Justice Santosh Hegde's outburst and resignation last month for the Government to concede some powers to him and appoint a Upa Lokayukta. Going by the number of cases pending before the Lokayukta and Upa Lokayukta, the institution needs better staff and at least another Upa Lokayukta to clear all pending cases. The government should whole heartedly back the fight against corruption. The powers-that-be should not give an impression that they are trying to shield the corrupt.

The State Cabinet, on 9th of July has approved certain amendments to the Karnataka Lokayukta Act, rather belatedly, which is a welcome move.

## Random Reflections

Ghaziabad town in Uttar Pradesh should be haunting the collective conscience of Indian judiciary for long time for all the wrong reasons. During the month of July, the CBI filed charge sheet against seventy eight persons which includes three former judges of Allahabad High Court and three former District and Sessions Judges of the State. Charge is embezzlement of about eight crore rupees of Employees Provident Fund during the period in question. Surprisingly, the name of a Supreme Court Judge did not figure in the charge sheet who was named by the prime accused when the scam came to light. When the Constituent Assembly adopted the Constitution it would not have dreamt that unscrupulous elements would occupy the exalted position in the higher judiciary. How naïve were the members of the constituent assembly !



K.Suryanarayana Rao
9845529448

Obviously it takes us to the efficacy of the pre-appointment screening of people to be appointed and their dubious background. The home ministry of the concerned state in all probability routinely clears the cases of the nominees without bothering to ascertain the credentials of such nominees. Take the instance of an appointee to one of the high courts in north-eastern region who was not actually sworn in as a result of information received including his moral turpitude. It is ironical that a District Judge in Karnataka had to be discharged after he had served the judiciary for quite a length of time because his name was found in the list of Goondas prepared by the Police.

In the case of in service judges who has to be elevated to the apex judiciary position is still worse because of absence of any machinery which evaluates the cases of the proposed appointee. It is taken for granted that their antecedents are fine because at the stage of their initial appointment they were found to be suitable. In the light of the experience of Justice Ramaswamy and Chief Justice of High Court of Karnataka, P.D.Dinakaran, time has now come to revisit the system over again.

Why the names of persons in consideration can not be published in advance so that the Bar and the persons concerned with the health of judiciary can convey their views more so with regard to antecedents of the proposed names under scanner. Any such input can be forwarded by the appointing authority to the concerned home ministry to cross check the information so receved from the Bar and public. Take the case of United States, the views of the Bar is considered vital in the appointment of judges at the lower hierarchy. But why not in India?

Instead of showering positions in judiciary on the basis of favour by the collegium it is high time that yardsticks for selection are prescribed and the antecedents of persons to be appointed are obtained after thorough verification. Even in the case of elevation of Judges to higher judiciary the track record of such proposed appointees and their antecedents while in service are properly evaluated on the basis of the reports about their overt and covert actins received from appropriate quarters. The local Bar can be one such valuable source. Can we hope that sanity will prevail upon the power that be who are entrusted with the task of protecting the institution of judiciary? Otherwise the strength of black sheep and the mole hills which has the potential to damage the institution from within would increase.

## High Court Cause list and case status on your mobile phone

The High Court of Karnataka has developed the facility to know the status of the case filed in the High Court and its Circuit Benches, status of the Application filed for Certified Copy of the Orders and Judgments and the current case being heard in a Court Hall through Cell phone SMS messages..

The procedure for getting information through SMS is as below.

SMS Service for High Court of Karnataka by National Informatics Centre, Bangalore

1. Case Status :

The user has to create a message with the following text :

KARHCCS <Case Type > <Case No> <Case Year> <Bench>

This message has to be sent to the Mobile Number: 9212357123

Here

<CaseYear> should be 4 digit

<Bench> can be B , D or G where B- Bangalore , D- Dharwad ,G - Gulbarga

Ex. Text of Message is

KARHCCS WP 1299 2010 B

Any suggestions and feedback to improve the system may be sent to The Registrar General, High Court of Karnataka, Bangalore or through eMail at shhcourt@nic.in

# Karnataka Land Reforms Act 1961 – Section 79-B

## The prohibition of holding agricultural land by certain persons – whether restriction is absolute or deceptively directory.

J. Rangarajan
jr_rajan@dataone.in
98450 26531

1. The Karnataka Land Reforms Act 1961, aims to enact a uniform law relating to land reforms, in the State of Karnataka. Among various provisions of the Karnataka Land Reforms Act 1961, Section 79-B, is an important provision in the Act, which prima facie appear to prohibit the holding of agricultural lands, by certain persons, enumerated therein, although such restriction is not legally absolute.
2. Section 79-B, of the Karnataka Land Reforms Act 1961, is self explanatory.
3. From a careful analysis of the above provision, it is clear that Section 79-B will have to be read harmoniously along with Section 63(7)(a) of the Act. These provisions will have to be further interpreted and appreciated, in the context of Rule 22 of the Karnataka Land Reforms Rules 1974.
4. It is therefore evident that the institutions covered by Section 63(7) of the Act, are fully protected and insulated against the sweep of Section 79-B of the Act. This protection is very clear, precise and unambiguous.
5. Section 63(7) of the Act, reads as follows;

   *(a) No educational, religious or charitable institution or society or trust, of a public nature, capable of holding property, formed for an educational, religious or charitable purpose shall hold land except where the income from the land is appropriated solely for the institution or the society or the trust concerned. Where the land is so held by such institution, society or trust, the ceiling area shall be twenty units.*

   *(b) If any question arises whether the income from the land is solely appropriated for the institution, society or trust, it shall be decided by the prescribed authority. The decision of the prescribed authority shall be final. Where the prescribed authority decides that the income is not so appropriated, the land held by the institution, society or trust shall be deemed to be surplus land and the provisions of Sections 66 to 76 shall, so far as may be, apply to the surrender to and vesting in the State Government of such land. The provisions of this sub-section shall have effect notwithstanding anything in this Act.*

6. For purposes of Section 63(7)(b) of the Act, the prescribed authority, is the Divisional Commissioner, under Rule 22 of the Karnataka Land Reforms Rules 1974. Thus so long as a society, trust or an educational institution utilises, the income from the land solely for its purposes, their holding of the agricultural lands is fully protected. It is ultimately the Divisional Commissioner, who has to adjudicate this disputed question of fact, as to whether the income from the land is so utilised or not.
7. A division bench of the Hon'ble High court of Karnataka at Bangalore, in **W.P. No. 16517/1987, Dt. 21.06.1993,** in the case of the State of Karnataka V/s. The Mysore Notre Dames Sisters Society (Regd.) has held "Section 63(7)(a) of the Karnataka Land Reforms Act 1961, will have to be read along with Section 79-B and it is therefore permissible for a society to purchase and to hold the land, so long as the income of the land is appropriated for the purposes of the society...........". Unfortunately this authoritative division bench judgement is unreported.
8. In **ILR 1989, KAR – Pg. 897** – In the case of Management of Tungabhadra Sugar Works Limited V/s. State of Karnataka, another division bench, with reference to a similar provision, has held as follows.

   "the question of applying Section 79-B, of the Karnataka Land Reforms Act 1961 does not arise, if the extent of total holding is saved under Section 63(8) of the Karnataka Land Reforms Act 1961". The provisions examined in this judgement, are in pari-materia with Section 63(7) of the Karnataka Land Reforms Act 1961, referred to above.
9. A learned single judge of the Hon'ble High court of Karnataka at Bangalore, in a case reported in **2002(2) KCCR – Pg. 1104** – in the case of Deputy Commissioner, Bellary V/s. Sri. P. Siddappa, has held as follows.

   "a trust is entitled to hold the land, under Section 63(7) of the Karnataka Land Reforms Act and hence the provisions of Section 79B, is not attracted........ There is no provision for vesting of the land in question, to the government, even if the trust is not cultivating the land personally.........".
10. A learned single judge of the Hon'ble High court of Karnataka at Bangalore, in a case reported in **2002(2) KCCR – Pg. 964** – in the case of Nandi Basaveshwara Swamy Devaru V/s. Deputy Commissioner, Davanagere as held as follows.

    "Under Section 63(7)(a) of the Karnataka Land Reforms Act, a charitable society formed for religious or charitable purposes, is entitled to hold the lands and provisions of 79-B, is not at all applicable.........."
11. The Revenue Officers, such as the Tahasildars or sometimes the Assistant Commissioner, initiate suo-motto proceedings and attempt to forfeit the lands for the State for alleged violation of the provisions of Section 79-B of the Karnataka Land Reforms Act 1961. Even such suo-motto proceedings, will have to be initiated within a reasonable time. In this regard, it is worthwhile to refer to a unreported division bench judgment of the Hon'ble High çourt of Karnataka at Bangalore in **W.A. No. 8643/1996, Dt. 09.02.1998,** wherein our Hon'ble High court as held as follows.

    "No limitation is prescribed for exercising the power of resumption of the land. Where there is violation of Section 79-B, of the Karnataka Land Reforms Act 1961 and where there is no limitation prescribed, the revisional powers or suo-motto powers has to be exercised within a reasonable time........".

    ".......... for exerçising suo-motto powers the authority has to exercise within a reasonable time, which is not more than one year..........".
12. In this regard, the decisions, in **AIR 1969 – SC – Pg. 1297** – and **SCC 1997 – Pg. 71,** are worth noting.
13. At this stage, it is very useful to refer to Section 104 of the Karnataka Land Reforms Act 1961, which deals with plantations. The said provisions provides, "Section 104 – Plantations – the provisions of Section 38, Section 63, other than sub section (9) thereof Section 64, 79-A, 79-B and 80 shall not apply to plantations.
14. To conclude, Section 79-B of the Karnataka Land Reforms Act 1961, does not prohibit purchase and holding of agricultural lands in its own name so long as there is compliance with Section 63(7) of the Karnataka Land Reforms Act 1961 and Rule 22 of the Karnataka Land Reforms Rules 1974. Thus Section 79-B, does not create a total bar and the restriction thereunder is not absolute. It is high time, that the state issues appropriate circulars, imputing knowledge of the various judgments, referred to above to the revenue officials and officers in general, so that the general public are not exposed to vagaries of officialdom.

**W.P. No. 16517/1987, Dt. 21.06.1993**
**ILR 1989, KAR – Pg. 897**
**2002(2) KCCR – Pg. 1104**
**2002(2) KCCR – Pg. 964**
**W.A. No. 8643/1996, Dt. 09.02.1998**
**AIR 1969 – SC – Pg. 1297**
**SCC 1997 – Pg. 71**

★

## 'We need more power', Central Vigilance Commission

The Central Vigilance Commission (CVC) has sought more powers from the Government particularly to protect the individuals who expose corruption. The CVC wants to protect those who expose corruption by government officials and departments. Many times such whistle blowers are victimised, hounded or harassed by the bureaucracy.

The CVC is a designated authority to receive and enquire into the complaints against officials of the Central Government departments. The CVC is required to ensure protection of those who expose corruption under the Public Interest Disclosure and Protection of Informers Resolution (PIDPI).

"One of the limitations faced by the Commission under the resolution is that the Commission has not been provided with enforcement powers nor has it been made mandatory for the administrative authorities to comply with CVC's directives to protect whistleblowers from harassment," chief vigilance commissioner, Pratyush Sinha told PTI in an interview. As a result of this on many an occasion whistle blowers within the Government set up are subjected to inconvenient transfer, denial of promotion or other forms of harassment.

## Change of jurisdiction

To facilitate uniform and better administrative control of 100 per cent Export Oriented Units (EOU), Software Tech Parks (STP), Export Hardware Tech Parks (EHTP) units and also to facilitate shifting Goods and Services Tax (GST) regime in future, the Central Board of Excise and Customs has decided that 100 per cent EOU/ STP/EHTP units functioning in the jurisdiction of Bangalore Customs will henceforth be under the administrative control of the respective jurisdiction Bangalore Central Excise Commissionerates with effect from July 31,2010.

## Telecom licence conditions made stringent

The government on 28th July tightened the conditions of Telecome licences to impose stiff penalty for security breaches.

The amendments to conditions have been brought in to enable the Government to spefically locate any mobile phone subscriber even if he is on move.

To comply with the new conditions, Telephone service providers will have to make necessary technical up gradation to their existing equipments to track a subscriber even if he is on move. Under the new rule network forensics, network hardening, network penetration test, etc, will be done by international agencies in consultation with the government. In case a security breach is detected after installation of the equipment, a penalty of Rs. 50 crore for each purchase order will be imposed on the licencee. In addition, a penalty of 100% of the contract value will be levied on the licencee in case of violation of norms.

Licencees in the telecom sector are service providers, such as Bharti, Vodafone, Reliance Communications, Idea, Tata Teleservices, Bharat Sanchar Nigam Ltd and Mahanagar Telephone Nigam Ltd.

### Obituary

***We regret to inform the sad demise of the following person***

- **On 16.06.2010 S.A.Rasheed (58), Advocate expired at Bangalore**
- **On 03.07.2010 A Gopalaiah (58), Advocate expired in a ghastly road accident. He was returning from Tirupati alongwith family. His wife also expired in the accident.**
- **On 10.07.2010 S.Suresh, Advocate expired at Bangalore.**
- **On 15.07.2010 G.Chander Kumar, Senior Advocate, expired.**

## A brief profile of Hon'ble Mr. Justice J. S. Khehar

- Was born on August 28, 1952. Earned his LL.M. with gold medal from Panjab University.
- Was enrolled as an Advocate in 1979 and practiced mainly in the Punjab and Haryana High Court, Himachal Pradesh High Court, and the Supreme Court. Was appointed as Additional Advocate General, Punjab in January 1992. Was designated as Senior Advocate in February, 1995.
- Appeared as counsel for Mr. M. Krishnaswamy, M.P. (from the Arani constituency in Tamil Nadu), in the defence of J| V. Ramaswami, then Judge of the Supreme Court of India, before the Judges Inquiry Committee (comprising of J| P.B. Sawant, then Judge Supreme Court of India; Chief Jutice Mr. P.D. Desai of the Bombay High Court; and J| O. Chinnappa Reddy, former Judge of the Supreme Court) constituted to investigate the grounds on which the removal of J| V. Ramaswami was sought.
- Was elevated to the Bench of High Court of Punjab and Haryana, on February 8, 1999. Was appointed as Acting Chief Justice of the Punjab and Haryana High Court twice i.e., with effect from August 02, 2008, and again, with effect from November 17, 2009. Was elevated as Chief Justice of the High Court of Uttarakhand, at Nainital, on November 29, 2009.
- By a notification dated May 20, 2010 the Chairman of the Rajya Sabha appointed J| J.S.Khehar as a member of the Judges Inquiry Committee for investigating the grounds on which the removal of J| P.D. Dinakaran, Chief Justice of the Karnataka High Court, has been sought.
- Is scheduled to retire on August 28, 2014.

## EVENTS & HAPPENINGS

On 26.07.2010 Katta Subramanya Naidu, Housing Minister and G.T.Deve Gowda, President, Karnataka Housing Board addressed member of AAB.

On 23.07.2010 the President and Vice President, Karnataka Bar Council addressed members of AAB in Vakeelara Bhavana on recent amendments to Advocates Welfare Fund Act.

On 21.07.2010 P.Karunakar got elected un opposed as the Joint Secretary of the Executive Committee of High Court unit of AAB in an emergency meeting.

On 31.07.2010 under the joint auspice of Legal and Human Rights Department and Karnataka Pradesh Congress Committee a conference of Advocates and human rights activists was held. The conference was addressed by Veerappa Moily, Minster for Law and Abhishek Manu Singhvi, Senior Advocate on 'Law as an instrument of economic and social change'.

## Miscellany

- N.P.Kalleshappa, Sindhoor.K, Arathi.N.J. advocates have shifted their chamber to No.12, Ground Floor, 5th Main 3rd Cross, Near Mothi Mahal, Gandhinagar, Bangalore-560009.
- M.S.Nagaraja, Advocate, shifted his chamber to No.233, I Floor, Lakshmi Nivasa, Subedar Chatram Road, Opp: Sandhya Lodge, Gandhinagar, Bangalore-560009
- Under the auspice of Karnataka Chapter of the International Commission of Jurists, a seminar has been organized on "Proposed Amendments to the Arbitration and Conciliation Act, 1996" on 07.08.2010 at 9.30 am at Karnataka Judicial Academy Conference Hall, Crescent Road, Bangalore.

**Published by** : S. N. Prashanth Chandra, Lahari Advocates Forum, No. 2980, "Laxmideep", 17th Cross, K.R. Road, BSK II Stage, Bangalore-560 070
**Printed at** : Vee Kay Printers & Publishers, # 396, Ooliga Complex, Sampige Road, Malleshwaram, Bangalore-560 003.
**Editor : Aravind. M. Neglur.** aravindneglur@gmail.com **KARBIL 01707 / 10 /1/2009-TC**

# ಲಹರಿ ಸಂವಾದ

ಸಂಪುಟ – ೧ | ಶ್ರೀ ವಿಕೃತಿ ನಾಮ ಸಂವತ್ಸರ ಆಷಾಢ – ಶ್ರಾವಣ | ಸಂಚಿಕೆ – ೩


ಒಳಗೇನಿದೆ?


ಪುಟ ೧ : ಸುದ್ದಿ
ಪುಟ ೨ : ಪ್ರಚಲಿತ, ಓದುಗರ ಓಲೆ
ಪುಟ ೩ : ನ್ಯಾಯಾಲಯದ ಅಂಗಳದಿಂದ, ಅಂಕಣ
ಪುಟ ೪ : ಸುದ್ದಿ


ನಿರೀಕ್ಷಿಸಿ...
**ಆಲಿಸಿ–ಪಾಲಿಸಿ**
ಮುಂದಿನ ಸಂಚಿಕೆಯಿಂದ

## ನ್ಯಾ॥ ದಿನಕರನ್ ಸಿಕ್ಕಿಂಗೆ ವರ್ಗಾವಣೆ

### ವಕೀಲ ಸಮುದಾಯಕ್ಕೆ ಸಂದ ಜಯ

ನ್ಯಾ॥ ದಿನಕರನ್ ಕರ್ನಾಟಕದಿಂದ ವರ್ಗಾವಣೆಯಾಗಿದ್ದಾರೆ. ಅವರು ಸಿಕ್ಕಿಂ ಉಚ್ಚ ನ್ಯಾಯಾಲಯಕ್ಕೆ ವರ್ಗಾವಣೆಗೊಂಡಿದ್ದಾರೆ. ಕರ್ನಾಟಕ ಉಚ್ಚ ನಾಯ್ಯಾಲಯಕ್ಕೆ ನ್ಯಾ॥ ಜಗದೀಶ್ ಸಿಂಘ್ ಖೇಹರ್ ಹೊಸ ಮುಖ್ಯ ನ್ಯಾಯಮೂರ್ತಿಯಾಗಿ ಬರಲಿದ್ದಾರೆ.

ಈ ಹಿಂದೆ ನ್ಯಾ। ದಿನಕರನ್ ಮತ್ತು ಇತರ ಮುಖ್ಯ ನಾಯ್ಯಮೂರ್ತಿಗಳನ್ನು ವರ್ಗಾಯಿಸುವ ಸ.ನ್ಯಾ. ದ ಕೊಲೇಜಿಯಂನ ತೀರ್ಮಾನವನ್ನು ಕೇಂದ್ರ ಪುನರ್ಪರಿಶೀಲಿಸಲು ಕೇಳಿತ್ತು. ಮುಖ್ಯ ನ್ಯಾಯಮೂರ್ತಿಯನ್ನು ಆಗಾಗ ವರ್ಗಾಯಿಸುವುದರಿಂದ ರಾಜ್ಯದ ನ್ಯಾಯಾಂಗೀಯ ಆಡಳಿತದ ಮೇಲೆ ಪರಿಣಾಮ ಬೀರುತ್ತದೆಂಬುದು ಕೇಂದ್ರದ ಆಕ್ಷೇಪಕ್ಕೆ ಕಾರಣವಾಗಿತ್ತು. ಹೀಗಾಗಿ ಕೇಂದ್ರ ಸರಕಾರ ನ್ಯಾ॥ ದಿನಕರನ್ ಅಲ್ಲದೆ ಇನ್ನು ಹಲವು ಮುಖ್ಯ ನ್ಯಾಯಮೂರ್ತಿಗಳ ವರ್ಗಾವಣೆಯ ಕಡತವನ್ನು ಕೊಲೇಜಿಯಂಗೆ ಹಿಂತಿರುಗಿಸಿತ್ತು.

ಈ ಹಿನ್ನೆಲೆಯಲ್ಲಿ ತನ್ನ ನಿರ್ಧಾರವನ್ನು ಪುನರ್ಪರಿಶೀಲಿಸಿದ ಕೊಲೇಜಿಯಂ, ನ್ಯಾ॥ ದಿನಕರನ್ ವಿಷಯದಲ್ಲಿ ತನ್ನ ನಿರ್ಧಾರವನ್ನು ಬದಲಿಸದಿರಲು ನಿಶ್ಚಯಿಸಿತು. ಹೀಗಾಗಿ ಸಾಂವಿಧಾನಿಕವಾಗಿ ಬೇರೆ ದಾರಿಯಿಲ್ಲದೆ ಸರಕಾರ ನ್ಯಾ॥ ದಿನಕರನ್ ಅವರನ್ನು ಸಿಕ್ಕಿಂಗೆ ವರ್ಗಾಯಿಸಿದೆ.

ಕಳಂಕಿತ ನ್ಯಾಯಮೂರ್ತಿಯನ್ನು ಕರ್ನಾಟಕ ಉಚ್ಚ ನ್ಯಾಯಾಲಯದಿಂದ ವರ್ಗಾಯಿಸಲು ವಕೀಲ ಸಮುದಾಯ ಒತ್ತಾಯಿಸಿದ್ದನ್ನು ಇಲ್ಲಿ ನೆನೆಯಬಹುದು.

ನ್ಯಾ ಜೆ.ಎಸ್. ಖೇಹರ್ ಇಲ್ಲಿಗೆ ಉತ್ತರಾಖಂಡದಿಂದ ವರ್ಗವಾಗಿ ಬರಲಿದ್ದಾರೆ. ಅವರ ಕಿರು ಪರಿಚಯಕ್ಕಾಗಿ ನೋಡಿ 'ಕಮ್ಯುನಿಕ್' ಪುಟ –೪.

ವರ್ಗಾಯಿತ ಮುಖ್ಯ ನ್ಯಾಯಮೂರ್ತಿಗೆ ಬೆಂಗಳೂರು ವಕೀಲ ಸಂಘದಿಂದ ಬಿಳ್ಕೊಡುಗೆ ಸಮಾರಂಭ ಇರುವುದಿಲ್ಲವೆಂದು ಸಂಘದ ಅಧ್ಯಕ್ಷ ಬಿ.ವಿ.ಪುಟ್ಟೇಗೌಡ ಸ್ಪಷ್ಟಪಡಿಸಿದ್ದಾರೆ.

## ಭಾರತೀಯ ನ್ಯಾಯಾಂಗ ಸೇವೆ ಸದ್ಯಕ್ಕಿಲ್ಲ

### ನ್ಯಾಯಾಲಯಗಳಲ್ಲಿ ಮೂಡದ ಒಮ್ಮತ

ಭಾರತೀಯ ಆಡಳಿತ ಸೇವೆ, ಭಾರತೀಯ ಪೊಲೀಸ್ ಸೇವೆಯಂತೆ ಭಾರತೀಯ ನ್ಯಾಯಾಂಗ ಸೇವೆಯನ್ನು ಪ್ರಾರಂಭಿಸಲು ದೇಶದ ವಿವಿಧ ಉಚ್ಚ ನ್ಯಾಯಾಲಯಗಳ ಮಧ್ಯೆ ಒಮ್ಮತ ಮೂಡುತ್ತಿಲ್ಲ.

ನ್ಯಾಯಾಂಗ ಸರ್ಕಾರದ ಪ್ರಮುಖ ಅಂಗವಾಗಿದ್ದು ನ್ಯಾಯಾಂಗಕ್ಕೆ ಅಧಿಕಾರಿಗಳನ್ನು ಅಖಿಲ ಭಾರತ ಮಟ್ಟದಲ್ಲಿ ಆಯ್ಕೆ ಮತ್ತು ನೇಮಕಾತಿ ನಡೆಯುತ್ತಿಲ್ಲ. ಪ್ರತಿ ರಾಜ್ಯಕ್ಕೆ ಬೇರೆ ಬೇರೆ ನ್ಯಾಯಾಂಗ ಇಲಾಖೆ ಇದ್ದು ರಾಜ್ಯಮಟ್ಟದಲ್ಲಿ ಉಚ್ಚ ನ್ಯಾಯಾಲಯದಿಂದ ಆಯ್ಕೆಯ ಪ್ರಕ್ರಿಯೆ ನಡೆಯುತ್ತಿದೆ. ಹೀಗಾಗಿ ಭಾರತೀಯ ನ್ಯಾಯಾಂಗ ಸೇವೆಯನ್ನು ಪ್ರಾರಂಭಿಸುವ ಕೇಂದ್ರ ಸರಕಾರದ ಕ್ರಮಕ್ಕೆ ಸಂಬಂಧಿಸಿದವರಿಂದ ಪ್ರೋತ್ಸಾಹ ಸಿಗುತ್ತಿಲ್ಲ.

ಸುಮಾರು ಐದು ವರ್ಷಗಳಷ್ಟು ಹಳೆಯದಾದ ಸರಕಾರದ ಈ ಕ್ರಮಕ್ಕೆ ಚಾಲನೆ ದೊರೆತದ್ದು ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆ, ಕಾನೂನು ಮತ್ತು ನ್ಯಾಯ ಸಚಿವಾಲಯಕ್ಕೆ ಸಂಬಂಧಿಸಿದ ಪಾರ್ಲಿಮೆಂಟರಿ ಸ್ಟ್ಯಾಂಡಿಂಗ್ ಕಮಿಟಿಯ ೧೫ನೆ ವರದಿ. ಮೇ, ೨೦೦೬ರಂದು ಮಂಡಿಸಲಾದ ಈ ವರದಿ ದೇಶದಾದ್ಯಂತ ನ್ಯಾಯಾಂಗ ಸೇವೆಯ ಅಧಿಕಾರಿಗಳಾದ ಸಿವಿಲ್ ನ್ಯಾಯಾಧೀಶರು (ಹಿರಿಯ ಮತ್ತು ಕಿರಿಯ ಶ್ರೇಣಿ) ಮತ್ತು ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರನ್ನು ಅಖಿಲ ಭಾರತ ಮಟ್ಟದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಏಕರೂಪವಾಗಿ ಆಯ್ಕೆ ಮಾಡುವಂತೆ ಸಲಹೆ ನೀಡಿದೆ.

## ಎಂ.ಪಿ. ಆಯ್ಕೆ ಅಸಿಂಧು : ಕೇರಳ ಉ.ನ್ಯಾ

### ಮೀಸಲಾತಿ ವಿವಾದ ಕಾರಣ

ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡಿದ್ದರೂ ಜಾತಿ ಮೀಸಲಿನಡಿ ಲೋಕಸಭೆ ಚುನಾವಣೆಯಲ್ಲಿ ಗೆದ್ದು ಬಂದಿದ್ದ ಕೇರಳದ ಲೋಕಸಭಾ ಸದಸ್ಯರೊಬ್ಬರು ಕೇರಳ ಉಚ್ಚ ನ್ಯಾಯಾಲಯದ ಆಜ್ಞೆಯಿಂದಾಗಿ ಸ್ಥಾನ ಚ್ಯುತರಾಗಿದ್ದಾರೆ.

ಮಾವೇಲಿಕರ ಮೀಸಲು ಕ್ಷೇತ್ರದಿಂದ ಆಯ್ಕೆಯಾಗಿದ್ದ ಕಾಂಗ್ರೆಸ್ಸಿನ ಉಮೇದುವಾರ ಕೊಡುಕ್ಕುನ್ನಿಲ್ ಸುರೇಶ್ ಮತಾಂತರಗೊಂಡ ಕ್ರಿಶ್ಚಿಯನ್ ಆಗಿದ್ದರೂ ತಮ್ಮನ್ನು ಅನುಸೂಚಿತ ಜಾತಿಯವನೆಂದು ಹೇಳಿಕೊಂಡು ಚುನಾವಣೆಗೆ ಸ್ಪರ್ಧಿಸಿ ಗೆದ್ದಿದ್ದರು. ವಿಫಲ ಅಭ್ಯರ್ಥಿ, ಸಿಪಿಐನ ಆರ್.ಎಸ್. ಅನಿಲರ ಚುನಾವಣಾ ತಕರಾರು ಅರ್ಜಿಯ ಮೇಲೆ ಈ ನಿರ್ಧಾರ ಹೊರಬಿದ್ದಿದೆ.

## ನ್ಯಾಯಾಂಗ, ಸರ್ಕಾರದ ಕಣ್ಣಲ್ಲಿ ಗೃಹಿಣಿಯರ ಪಾತ್ರ ನಗಣ್ಯ: ಸ.ನ್ಯಾ.ಕ್ಕೆ ಅಸಮಾಧಾನ

### *ಗೃಹಿಣಿಯರು, ವೇಶ್ಯೆಯರು, ಸೆರೆಮನೆವಾಸಿಗಳು, ಭಿಕ್ಷುಕರು ಒಂದೆ ಪಟ್ಟಿಯಲ್ಲಿ.*

ಕಳೆದ ಜನಗಣತಿಯ ವೇಳೆಯಲ್ಲಿ ಕೇಂದ್ರ ಸರ್ಕಾರ ಮಾಡಿದ ತಪ್ಪೊಂದು ಸರ್ವೋಚ್ಚ ನ್ಯಾಯಾಲಯದ ತೀಕ್ಷ್ಣ ಪ್ರತಿಕ್ರಿಯೆಗೆ ಗುರಿಯಾಗಿದೆ.

ಕೇಂದ್ರ ಸರಕಾರ ಸ್ವತಂತ್ರ ಆದಾಯ ಹೊಂದಿಲ್ಲದವರ ಪಟ್ಟಿಯಲ್ಲಿ ಸೆರೆಮನೆವಾಸಿಗಳು, ಭಿಕ್ಷುಕರು, ವೇಶ್ಯೆಯರನ್ನು ಸೇರಿಸಿತ್ತು. ಇಷ್ಟೆ ಆಗಿದ್ದರೆ ಯಾರ ತಕರಾರೂ ಸುದ್ದಿಯಾಗುತ್ತಿರಲಿಲ್ಲ. ಆದರೆ ಎಲ್ಲೊ ಎಡವಿದ ಕೇಂದ್ರ ಸರಕಾರ ಭಾರತದಾದ್ಯಂತ ಇರುವ ಸುಮಾರು ೩೬.೭ ಮಿಲಿಯನ್ ಗೃಹಿಣಿ(Home Maker)ಯರನ್ನೂ ಇದೆ ಪಟ್ಟಿಯಲ್ಲಿ ಸೇರಿಸಿದೆ!

ಶ್ರಮದಾನವನ್ನು ಹಣಕ್ಕೆ ಪರಿವರ್ತಿಸುವುದಾದರೆ ಮನೆಗೆಲಸ ಮಾಡುವ ಗೃಹಿಣಿಯರ ಶ್ರಮ ವಾರ್ಷಿಕವಾಗಿ ಸುಮಾರು ೩,೭೯,೦೦೦ ಕೋಟಿ ರೂಪಾಯಿಗಳೆಂದು ಲೆಕ್ಕ ಹಾಕಲಾಗಿದೆ. ವಾಸ್ತವಾಂಶ ಹೀಗಿದದ್ದೂ ಇಂತಹ ಪಟ್ಟಿಯನ್ನು ಜನಗಣತಿಯಲ್ಲಿ ಸೇರಿಸಿರುವುದು ಒಂದೊ ಸರ್ಕಾರದ ಅಸೂಕ್ಷ್ಮ ಪ್ರವೃತ್ತಿ (insensitive attitude) ಕಾರಣ ಅಥವಾ ಅಧಿಕಾರಿಗಳ ಮಟ್ಟದಲ್ಲಿ ಇರಬಹುದಾದ ಲಿಂಗ ತಾರತಮ್ಯ ಮನೋಭಾವ ಕಾರಣ.

"ಇಂತಹ ವಸಾಹತುಶಾಹಿ ಮನೋಭಾವದಿಂದ ಸಮಾಜದಲ್ಲಿ ಮಹಿಳೆ ಹಿಂದುಳಿದು, ತುಳಿತಕ್ಕೊಳಗಾಗಿರುವುದು" ಎಂದಿದೆ ಸರ್ವೋಚ್ಚ ನ್ಯಾಯಾಲಯ. ಮುಂದುವರೆದ ನ್ಯಾಯಾಲಯ ಈ ವಿಷಯವನ್ನು ಪುನರ್ಪರಿಶೀಲಿಸಲು ಸಂಸತ್ತಿಗೆ ಕರೆ ಕೊಟ್ಟಿದೆ.

ಇಂತಹ ಪ್ರಕರಣ ಸರ್ವೋಚ್ಚ ನ್ಯಾಯಾಲಯದ ಮುಂದೆ ಬಂದದ್ದು ಹೀಗೆ, ಸುಮಾರು ಒಂದು ದಶಕಗಳ ಹಿಂದೆ ಉತ್ತರ ಪ್ರದೇಶದಲ್ಲಿ ಸಂಭವಿಸಿದ ರಸ್ತೆ ಅಪಘಾತವೊಂದರಲ್ಲಿ ಗೃಹಿಣಿ ಶ್ರೀಮತಿ ರೇಣು ಅಗರವಾಲ್ ಮೃತ ಪಟ್ಟರು. ಅವರ ಪತಿ ಅರುಣ್ ಅಗರವಾಲ್ ಪರಿಹಾರ ಕೇಳಿ ಎಂಎಸಿಟಿಯ ಮೊರೆ ಹೋದರು. ಟ್ರಿಬ್ಯೂನಲ್ ಅತ್ಯಂತ ಕಡಿಮೆ ಮೊತ್ತದ ಪರಿಹಾರ ನೀಡಿ, ಮೃತೆ, ಗೃಹಿಣಿಯಾಗಿದ್ದರಿಂದ ಅವರಿಗೆ ಸ್ವತಂತ್ರ ಸಂಪಾದನೆ ಇರಲಿಲ್ಲವಾದ್ದರಿಂದ ಕಡಿಮೆ ಪರಿಹಾರ ಸರಿಯಾದ ಪರಿಹಾರವೆಂದಿತು.

ಅಲಹಾಬಾದ್ ಉಚ್ಚ ನ್ಯಾಯಾಲಯ ಟ್ರಿಬ್ಯೂನಲ್ಲಿನ ಆಜ್ಞೆ ಮತ್ತು ಕಾರಣಗಳನ್ನು ಎತ್ತಿ ಹಿಡಿಯಿತು.

ಈ ವಿಷಯ ಸರ್ವೋಚ್ಚ ನ್ಯಾಯಾಲಯದ ಅಂಗಳಕ್ಕೆ ಬಂದಾಗ ನ್ಯಾಯಾಲಯದ ಪೀಠ, ಕಾರ್ಯಾಂಗ ಮತ್ತು ನ್ಯಾಯಾಂಗಗಳಲ್ಲಿನ ಜನರಲ್ಲಿರುವ ಲಿಂಗ ತಾರತಮ್ಯದ ಮನೋಭಾವವನ್ನು ಕಟು ಶಬ್ದಗಳಲ್ಲಿ ಟೀಕಿಸಿ ೨೦೦೧ರ ಜನಗಣತಿಯ ಪಟ್ಟಿಯ ಉದಾಹರಣೆಯನ್ನು ನೀಡಿತು.

# ಹಸಿರಿನಲ್ಲಿ ಲೀನವಾದ ಡೊರೋಥಿ

ಅಂತರ್ ರಾಷ್ಟ್ರೀಯವಾಗಿ ಮನ್ನಣೆ ಗಳಿಸಿರುವ ಹಸಿರಿನ ಜನಾಂದೋಲನ ಗ್ರೀನ್ ಪೀಸ್ ಸರಕಾರೇತರ ಸಂಘಟನೆಯ ತ್ರಿವಳಿ ಸಂಸ್ಥಾಪಕರಲ್ಲಿ ಒಬ್ಬರಾಗಿದ್ದ ಡೊರೋಥಿ ಸ್ಟೋವ್(೮೯) ಜುಲೈ ೨೪ರಂದು ನಿಧನರಾಗಿದ್ದಾರೆ. ಡೊರೇಥಿಯವರ ನಿಧನದಿಂದ ಗ್ರೀನ್ ಪೀಸ್‌ನ ಸಂಸ್ಥಾಪಕರೆಲ್ಲ ಜಗದ ರಂಗದಿಂದ ಕಣ್ಮರೆಯಾದಂತಾಗಿದೆ. ಇನ್ನೊಬ್ಬ ಸಂಸ್ಥಾಪಕ ಡೊರೊಥಿಯವರ ಪತಿ, ಇರ್ವಿಂಗ್ ಸ್ಟೋವ್ ೧೯೭೪ರಲ್ಲಿ ತೀರಿಕೊಂಡಿದ್ದರು. ಡೊರೋಥಿ ನಿಧನಕ್ಕಿಂತ ಮೂರು ವಾರ ಮೊದಲು ಮತ್ತೊಬ್ಬ ಸಂಸ್ಥಾಪಕ ಜಿಮ್ ಬೊಹ್ಲೆಮ್ ನಿಧನರಾಗಿದ್ದರು.

೧೯೭೧ರಲ್ಲಿ ಪ್ರಾರಂಭವಾದ ಗ್ರೀನ್ ಪೀಸ್ ಚಳುವಳಿ ಜನಸಾಮಾನ್ಯರ ಚಳುವಳಿ. ಪ್ರಭುತ್ವ ಹಸಿರಿನ ವಿರುದ್ಧ ಕ್ರಮ ಕೈಗೊಂಡಾಗಲೆಲ್ಲ ಗ್ರೀನ್ ಪೀಸ್ ಬೀದಿಗಿಳಿದು ಪ್ರತಿಭಟಿಸಿದೆ. ನಿಸರ್ಗವನ್ನುಳಿಸಲು ಕಾನೂನೊಂದು ಅಸ್ತ್ರವಾಗಬಲ್ಲದು ಎಂಬುದು ಅರಿವಿರದ ಕಾಲದಲ್ಲಿ ಗ್ರೀನ್ ಪೀಸ್ ಹಸಿರಿನ ಪರ ಜನಾಗ್ರಹ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಈ ಜನಾಗ್ರಹವೆ ಪ್ರಬಲ ಹಸಿರು ಕಾನೂನುಗಳನ್ನು ರೂಪಿಸಿದೆ.

**ಪ್ರಚಲಿತ**

ಗ್ರೀನ್ ಪೀಸ್‌ನ ಚಳುವಳಿ ಪ್ರಭುತ್ವದ ವಿರುದ್ಧ ಮಾತ್ರವಲ್ಲ ಬಹುರಾಷ್ಟ್ರೀಯ ಕಂಪನಿಗಳ ವಿರುದ್ಧವೂ ದನಿ ಎತ್ತಿದೆ. ಜಪಾನಿನ ಕಂಪನಿಗಳು ಸಾಗರದಾಳದಲ್ಲಿ ನಡೆಸುವ ವ್ಹೇಲ್ ಮತ್ತು ಷಾರ್ಕ್ ಬೇಟೆಯನ್ನು ಗ್ರೀನ್ ಪೀಸ್ ವಿರೋಧಸಿದೆ. ಅಮೇರಿಕಾ ಮತ್ತು ಇಂಗ್ಲೆಂಡಿನ ಕಂಪನಿಗಳು ನಡೆಸುವ ಕಾರ್ಖಾನೆಗಳು ಹೊರಸೂಸುವ ಮಾಲಿನ್ಯವನ್ನೂ ಗ್ರೀನ್ ಪೀಸ್ ವಿರೋಧಿಸಿದೆ. ಶ್ರೀಮಂತ ರೈತರು ನಡೆಸುವ ವ್ಯಾವಹಾರಿಕ ಕೃಷಿ ಕೂಡ ಗ್ರೀನ್ ಪೀಸ್‌ನ ದೃಷ್ಟಿಯಿಂದ ತಪ್ಪಿಸಿಕೊಂಡಿಲ್ಲ. ಗ್ರೀನ್ ಪೀಸ್ ರೈತರನ್ನು ಸಾಮಾಜಿಕ ಮತ್ತು ಆರ್ಥಿಕವಾಗಿ ಜವಾಬ್ದಾರಿಯುತ ಕೃಷಿಯಲ್ಲಿ ತೊಡಗಿಸಿಕೊಳ್ಳಲು ಒತ್ತಾಯಿಸುತ್ತಿದೆ. ಈ ಬಗ್ಗೆ ಜನಾಂದೋಲನ ನಡೆಸುತ್ತಿದೆ.

### ತನ್ನ ಅಂತರ್ಜಾಲ ತಾಣದಲ್ಲಿ ಹೇಳಿಕೊಂಡಿರುವಂತೆ ಗ್ರೀನ್ ಪೀಸ್‌ನ ಉದ್ದೇಶಗಳಿವು.

- ಹವಾಮಾನ ವೈಪರೀತ್ಯಕ್ಕೆ ಈಗಿರುವ ಸಾಂಪ್ರದಾಯಿಕ ಇಂಧನ ಮೂಲಗಳೆ ಕಾರಣ. ಈ ದೆಸೆಯಲ್ಲಿ ಕ್ರಾಂತಿಕಾರಕ ಬದಲಾವಣೆ ತರುವುದು.
- ಸಾಗರಗಳಲ್ಲಿ ನಡೆಯುವ ಕ್ರೂರ ಬೇಟೆಯನ್ನು ತಡೆದು ಸಾಗರ ಜೀವಿಗಳನ್ನು ಮತ್ತು ಸಾಗರಗಳನ್ನು ಸಂರಕ್ಷಿಸುವುದು.
- ಪ್ರಾಣಿ ಮತ್ತು ವನ್ಯ ಸಂಪತ್ತಿನ ಆವಾಸಸ್ಥಾನವಾಗಿರುವ ಕಾಡನ್ನು ಸಂರಕ್ಷಿಸುವುದು.
- ಎಲ್ಲ ಬಗೆಯ ಅಣ್ವಸ್ತ್ರಗಳ ನಿಷೇಧ ಮತ್ತು ನಿಷಸ್ತ್ರೀಕರಣದಿಂದ ಮನುಕುಲದ ಉಳಿವಿಗಾಗಿ ಪ್ರಯತ್ನ.
- ಅಪಾಯಕಾರಿ ರಾಸಾಯನಿಕಗಳ ಬಳಕೆಯಲ್ಲಿ ಬದಲಾವಣೆ ತಂದು ಮನುಕುಲದ ಮುಂದಿನ ಪೀಳಿಗೆಗಾಗಿ ವಿಷಕಾರಕ ರಹಿತ ಭವಿಷ್ಯವನ್ನು ನಿರ್ಮಿಸುವುದು.
- ಸಾವಯಾಜಿಕ ಮತ್ತು ಆರ್ಥಿಕವಾಗಿ ಜವಾಬ್ದಾರಿಯುತ ಕೃಷಿಯನ್ನು ಅಳವಡಿಸಿಕೊಳ್ಳಲು ಪ್ರಚಾರಾಂದೋಲನ ನಡೆಸುವುದು.

ನೆದರ್‌ಲೆಂಡಿನ ಆ್ಯಮ್ಸ್‌ಸ್ಟರ್ ಡ್ಯಾಂನಲ್ಲಿ ತನ್ನ ಕೇಂದ್ರ ಸಂಪರ್ಕ ಕಛೇರಿ ಹೊಂದಿರುವ ಗ್ರೀನ್ ಪೀಸ್, ವಿಶ್ವದಾದ್ಯಂತದ ಸುಮಾರು ೪೦ ದೇಶಗಳ ಹಸಿರುಳಿಸುವ ಚಳುವಳಿಗಳಲ್ಲಿ ಗಣನೀಯವಾಗಿ ಪ್ರಭಾವ ಬೀರುವಷ್ಟು ಪ್ರಬಲವಾಗಿದೆ. Direct action, Lobbying ಮತ್ತು Research ತನ್ನ ಗುರಿ ಸಾಧನೆಯ ಮಾರ್ಗಗಳೆಂದ ಗ್ರೀನ್ ಪೀಸ್ ಹೇಳಿಕೊಳ್ಳುತ್ತದೆ. ಗ್ರೀನ್ ಪೀಸ್ ನೇರವಾಗಿ ಚಳುವಳಿಗೆ ಧುಮುಕುತ್ತದೆ. ತನ್ನ ಗುರಿ ಸಾಧನೆಗೆ ಆಯಾ ದೇಶಗಳಲ್ಲಿ ರಾಜಕೀಯವಾಗಿ, ಸಾಮಾಜಿಕವಾಗಿ ಪ್ರಭಾವಿಯಾಗಿರುವ ವ್ಯಕ್ತಿಗಳಿಂದ, ಸಂಘ–ಸಂಸ್ಥೆಗಳಿಂದ ವಶೀಲಿ, ಪ್ರಭಾವ ಮಾಡಿಸುತ್ತದೆ. ಅಲ್ಲದೆ, ವೈಜ್ಞಾನಿಕ ಸಂಶೋಧನೆಗಳನ್ನು ಕೈಗೊಳ್ಳುವದರ ಮೂಲಕವೂ ಪರಿಸರ ಚಳುವಳಿಯ ತಥ್ಯಗಳನ್ನು ಮಿಥ್ಯಗಳಿಂದ ಬೇರ್ಪಡಿಸುತ್ತದೆ. ಸಿಎಫ್‌ಸಿ ರಹಿತ ರೆಫ್ರಿಜರೇಟರ್‌ಗಳು ಜಗತ್ತಿಗೆ ಗ್ರೀನ್ ಪೀಸ್‌ನ ಸಂಶೋಧನೆಯ ಕೊಡುಗೆ. ಸಾಮಾನ್ಯ ಫ್ರಿಜ್‌ಗಳು ಹೊರಸೂಸುವ ಸಿಎಫ್‌ಸಿ ಅನಿಲ ಒಝೋನ್ ಪದರದ ಛಿದ್ರೀಕರಣಕ್ಕೆ ಕಾರಣವಾಗುತ್ತಿದೆ.

### ಗುರಿ ಸಾಧನೆಯ ಮಾರ್ಗಗಳು:

- ನೇರ ಕ್ರಮ (Direct action) – ಬೀದಿಗಿಳಿದು ಪ್ರತಿಭಟಿಸುವುದು.
- ವಶೀಲಿ, ಪ್ರಭಾವ ಬೀರಿಸುವುದು (Lobbying) – ಸರಕಾರದ ಮಟ್ಟದಲ್ಲಿ ಪ್ರಭಾವ ಬೀರಿಸುವುದು.
- ಸಂಶೋಧನೆ (Research)– ವೈಜ್ಞಾನಿಕ ಸಂಶೋಧನೆಗಳ ಮೂಲಕ ಪರಿಸರ ಸಂರಕ್ಷಣೆಗೆ ಕೊಡುಗೆ.

ಸಂಪೂರ್ಣವಾಗಿ ಸಾರ್ವಜನಿಕ ದೇಣಿಗೆಗಳ ಮೇಲೆ ಅವಲಂಬಿತವಾಗಿರುವ ಗ್ರೀನ್ ಪೀಸ್ ಚಳುವಳಿ, ಸರಕಾರ ಮತ್ತು ತನ್ನ ನೀತಿ–ನಿಯಮಗಳ ಮೇಲೆ ಪ್ರಭಾವ ಬೀರುವಂತಹ ಯಾವುದೇ ಬಹುರಾಷ್ಟ್ರೀಯ ಕಂಪನಿಗಳಿಂದ ಹಣಕಾಸಿನ ಸಹಾಯವನ್ನು ಒಪ್ಪಿಕೊಳ್ಳುವುದಿಲ್ಲ. ದೇಣಿಗೆ ಮತ್ತು ಖರ್ಚು ವೆಚ್ಚಗಳ ವಿಷಯದಲ್ಲಿ ಪಾರದರ್ಶಕ ನಿಯಮಗಳನ್ನು ಅಳವಡಿಸಿಕೊಂಡಿದ್ದರೂ, ಗ್ರೀನ್ ಪೀಸ್‌ಗೆ ಅಪವಾದಗಳು ತಪ್ಪಿದ್ದಲ್ಲ.

### ಕಾನೂನಿನ ಕ್ಷೇತ್ರಕ್ಕೆ ಗ್ರೀನ್ ಪೀಸ್‌ನ ಕೊಡುಗೆ:

- ಕಾನೂನಿನ ಕ್ಷೇತ್ರಕ್ಕೆ ಗ್ರೀನ್ ಪೀಸ್‌ನ ಅತ್ಯಂತ ಪ್ರಮುಖ ಕೊಡುಗೆಯೆಂದರೆ, ಹಸಿರಿನ ಚಳುವಳಿಯ ಪರವಾಗಿ ಜನಾಭಿಪ್ರಾಯವನ್ನು ವಿಶ್ವದಾದ್ಯಂತ ರೂಪಿಸಿದ್ದು. ಇಂತಹ ಪ್ರಬಲ ಜನಾಭಿಪ್ರಾಯವೆ ಅಂತಿಮವಾಗಿ ಸರಕಾರಗಳನ್ನು ಬಿಗಿ ಪರಿಸರದ ಕಾನೂನುಗಳನ್ನು ಮಾಡಲು ಒತ್ತಾಯಿಸುವುದು.
- ಭಾರತದಲ್ಲಿ ೮೦ ಮತ್ತು ೯೦ರ ದಶಕಗಳು ಪರಿಸರ ಸಂರಕ್ಷಣೆಯ ವಿಷಯದಲ್ಲಿ ಮಹತ್ವಪೂರ್ಣ ಕಾಲಾವಧಿ. ಈ ಅವಧಿಯಲ್ಲಿ ಭಾರತ ಸರಕಾರ ಪರಿಸರ ಸಂರಕ್ಷಣೆಗಾಗಿ ಹಲವಾರು ಕಾನೂನುಗಳನ್ನು ಜಾರಿಗೊಳಿಸಿದ್ದು, ಗ್ರೀನ್ ಪೀಸ್ ಚಳುವಳಿ ಮತ್ತು ಅದರ ಪ್ರಭಾವ ಈ ಕಾನೂನಿನ ಹಿಂದಿರುವ ಅದೃಶ್ಯ ಶಕ್ತಿ.
- ಇದೆ ಅವಧಿಯಲ್ಲಿ ವಕೀಲ–ಹಸಿರಿನ ಕಾರ್ಯಕರ್ತ ಎಂ.ಸಿ. ಮೆಹ್ತಾ ದಾಖಲಿಸಿದ ಹಲವಾರು ಪರಿಸರ ಸಂರಕ್ಷಣಾ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗಳನ್ನು ಸರ್ವೋಚ್ಛ ನ್ಯಾಯಾಲಯ ತೀರ್ಮಾನಿಸಿತು. ಇಂತಹ ಬಹುತೇಕ ಪ್ರಕರಣಗಳಲ್ಲಿ ತೀರ್ಮಾನ ಹಸಿರಿನ ಪರವಾಗಿ ಬಂದಿದೆ. ಇಂತಹ ಹಲವಾರು ಪ್ರಕರಣಗಳಲ್ಲಿ ಗ್ರೀನ್ ಪೀಸ್ ವರದಿಯ ಉಲ್ಲೇಖಗಳಿವೆ.
- ಅಕ್ಟೋಬರ್ ೨೦೦೭ರಲ್ಲಿ ಗ್ರೀನ್ ಪೀಸ್ ಕಾರ್ಯಕರ್ತರು ಇಂಗ್ಲೆಂಡಿನ ಕಿಂಗ್ಸ್ ನಾರ್ಥ್ ವಿದ್ಯುತ್ ಸ್ಥಾವರದ ಚಿಮಣಿಯ ಮೇಲೆ ಹತ್ತಿ ಪ್ರತಿಭಟಿಸುತ್ತಿದ್ದಾಗ ಸ್ಥಾವರಕ್ಕೆ ಸುಮಾರು ೩೦,೦೦೦ ಪೌಂಡ್‌ಗಳ ಬೆಲೆಯಷ್ಟು ಹಾನಿಯಾಯಿತು. ಈ ಕಾರ್ಯಕರ್ತರನ್ನು ಬಂಧಿಸಿ ನ್ಯಾಯಾಲಯದ ಮುಂದೆ ವಿಚಾರಣೆಗೆ ಗುರಿಪಡಿಸಲಾಯಿತು. ಕಾರ್ಯಕರ್ತರು ಸ್ಥಾವರಕ್ಕೆ ಹಾನಿಯನ್ನುಂಟು ಮಾಡಿದ್ದನ್ನು ಒಪ್ಪಿಕೊಂಡು ತಮ್ಮ ಕೃತ್ಯದ ಸಮರ್ಥನೆಯಾಗಿ 'ತಾವು ಮಾಡಿದ ಸಣ್ಣ ಹಾನಿ, ಸ್ಥಾವರ ಪರಿಸರಕ್ಕೆ ಮಾಡುತ್ತಿದ್ದ ಹೆಚ್ಚಿನ ಹಾನಿಯನ್ನು ತಡೆಯುವುದಕ್ಕಾಗಿ ಮಾಡಿದ್ದು' ಎಂದರು. ನ್ಯಾಯಾಲಯ 'ಹೆಚ್ಚಿನ ಹಾನಿಯನ್ನು ತಡೆಯಲು ಮಾಡುವ ಸಣ್ಣ ಹಾನಿ ಅಪಕೃತ್ಯವಾಗಲಾರದು' ಎಂಬ ಅಪಕೃತ್ಯ ಕಾನೂನಿನ (Law of Tort) ನಿಯಮವನ್ನು ಆಧರಿಸಿ ಪ್ರಕರಣವನ್ನು ವಜಾಗೊಳಿಸಿತು.

ಇಂತಹ ವಿಶ್ವದಾದ್ಯಂತ ಪ್ರಭಾವ ಬೀರುವ ಚಳುವಳಿಯ ಸಂಸ್ಥಾಪಕಿ ಡೊರೋಥಿ ಸ್ಟೋವ್ ಹಸಿರಿನಲ್ಲಿ ಲೀನರಾಗಿದ್ದಾರೆ. ಅವರಿಗೆ ಅಂತಿಮ ಪ್ರಣಾಮ. ■

**ಓದುಗರ ಓಲೆ**

## ಮರ್ಯಾದಾ ಹತ್ಯೆ : ಬೇರೆ ಕಾನೂನೇಕೆ?

ದೇಶದಲ್ಲಿ ಹೆಚ್ಚುತ್ತಲಿರುವ ಮರ್ಯಾದಾ ಹತ್ಯೆ ಪ್ರಕರಣಗಳನ್ನು ವಿಚಾರಿಸಲು ಮತ್ತು ತೀರ್ಮಾನಿಸಲು ಬೇರೆಯದೆ ರೀತಿಯ ಕಾನೂನು ಬೇಕೆಂಬ ಕೂಗು ದೇಶದಾದ್ಯಂತ ಎದ್ದಿದೆ. ಈ ಸಂಬಂಧ ಬೇರೆ ಕಾನೂನು ಬೇಕೆ ಎಂದು ಪರಿಶೀಲಿಸಲು ಕೇಂದ್ರ ಸರಕಾರ ಆಯ್ದ ಮಂತ್ರಿಗಳ ಸಮೂಹ (Group of Ministers) ಒಂದನ್ನು ರಚಿಸಿದೆ.

ಈ ಹಿನ್ನೆಲೆಯಲ್ಲಿ ನಾವೆಲ್ಲ ವಿಚಾರ ಮಾಡಬೇಕಿರುವ ಪ್ರಶ್ನೆಯೆಂದರೆ ಭಾರತೀಯ ದಂಡ ಸಂಹಿತೆಯ ಸೆ. ೩೦೦ ಮರ್ಯಾದಾ ಹತ್ಯೆ ಪ್ರಕರಣಗಳನ್ನೂ ಒಳಗೊಳ್ಳದೆ? ಅದಕ್ಕಾಗಿ ಬೇರೆ ಕಾನೂನಿನ ಅವಶ್ಯಕತೆ ಇದೆಯೆ? ಹೊಸ ಕಾನೂನು ಗೊಂದಲ ಸೃಷ್ಟಿಸದೆ?

ಸ್ವಘೋಷಿತ ಬುದ್ಧಿಜೀವಿಗಳು ಮಾಧ್ಯಮಗಳಲ್ಲಿ ಇಂತಹ ಬೇಡಿಕೆ ಇಟ್ಟ ಮಾತ್ರಕ್ಕೆ ಸರಕಾರ ಹೊಸ ಕಾನೂನಿನ ಬಗ್ಗೆ ಮಾತನಾಡುವುದೇಕೆ? ಈಗಿರುವ ಕಾನೂನಿನ ಬಗ್ಗೆ ಸರಕಾರಕ್ಕೆ ನಂಬಿಕೆ ಸಾಲದೆ? ಹಾಗಿದ್ದರೆ ಕೇವಲ ಮರ್ಯಾದಾ ಹತ್ಯೆ ಪ್ರಕರಣಕ್ಕಷ್ಟೆ ಅಲ್ಲ ಎಲ್ಲ ಕೊಲೆಗಳಿಗೂ ಅನ್ವಯಿಸುವಂತೆ ಹೊಸ ಕಾಯ್ದೆ ರೂಪಿಸುವುದೆ ಸರಕಾರ?

ಸೆ. ೩೦೦ಕ್ಕೊಂದು ದೀರ್ಘ ಇತಿಹಾಸವಿದೆ. ಈ ಕಾನೂನು ಸಮಯದ ಪರೀಕ್ಷೆಯಲ್ಲಿ ಗೆದ್ದು ಬಂದಿದೆ. ಮರ್ಯಾದಾ ಹತ್ಯೆಗಳೂ ಮೂಲತಃ ಕೊಲೆ ಪ್ರಕರಣಗಳೆ– ಪ್ರೇರಣೆ, ಉದ್ದೇಶ ಏನೇ ಇರಲಿ– ಅಲ್ಲವೆ?

–*ಕೆ. ಶ್ರೀಕಾಂತ್ ಪಾಟೀಲ್*

*ವಕೀಲರು, ಉಪನ್ಯಾಸಕರು, ಬೆಂಗಳೂರು.*

### ಕಿರು–ಕಿರು ತೆರೆಯ ಮೇಲೆ ಕಾಸ್ ಲಿಸ್ಟ್

ಸಂಚಾರ ದೂರವಾಣಿಯ ಕಿರು–ಕಿರು ತೆರೆಯ ಮೇಲೆ ಉಚ್ಛ ನ್ಯಾಯಾಲಯದ ಕಾಸ್ ಲಿಸ್ಟ್ ಅಲ್ಲದೆ ಪ್ರಕರಣದ ವಿವರಗಳು ಲಭ್ಯ!

ವಿವರಗಳಿಗೆ ನೋಡಿ ಕಮ್ಯುನಿಕ್ ಪುಟ –೪ –ಸಂ.

## ನ್ಯಾಯಾಲಯಗಳ ಅಂಗಳದಿಂದ

### *ಸೆ. ೯ ದಂಡ ಪ್ರಕ್ರಿಯಾ ಸಂಹಿತೆ: ಮೊಕದ್ದಮೆಗಳ ವಿಚಾರಣಾ ಸ್ಥಳ ಬದಲಾವಣೆಯಾದರೆ ಮೊಕದ್ದಮೆ ಒಂದು ನ್ಯಾಯಾಲಯದಿಂದ ಇನ್ನೊಂದು ನ್ಯಾಯಾಲಯಕ್ಕೆ ವರ್ಗಾವಣೆಯಾದಂತೆಯೆ? ಇಂಥ ಸ್ಥಳ ಬದಲಾವಣೆ ಅಥವಾ ವರ್ಗಾವಣೆಯ ಆಜ್ಞೆಯನ್ನು ಮಾಡಲು ಆಪಾದಿತನನ್ನು ಆಲಿಸಬೇಕೆ? ಇಂಥ ಆಜ್ಞೆ ನ್ಯಾಯಿಕ ಆಜ್ಞೆಯೆ ಅಥವಾ ಆಡಳಿತಾತ್ಮಕ ಆಜ್ಞೆಯೆ?*

ಮೊಹಮ್ಮದ ಷಹಾಬುದ್ದೀನ್ ಬಿಹಾರದ ಕ್ಷೇತ್ರವೊಂದರಿಂದ ಲೋಕಸಭೆಗೆ ಆಯ್ಕೆಯಾದ ಜನಪ್ರತಿನಿಧಿ. ಇವರು ೪೦ಕ್ಕೂ ಹೆಚ್ಚಿನ ಮೊಕದ್ದಮೆಗಳಲ್ಲಿ ಆಪಾದಿತ. ಸಧ್ಯ ಸೆರೆಮನೆಯ ವಾಸಿ. ಈ ೪೦ ಪ್ರಕರಣಗಳ ವಿಚಾರಣೆಗೆ ವಿಚಾರಣಾಧೀನ ಕೈದಿಯಾಗಿ ಸೆರೆಮನೆಯಿಂದ ನ್ಯಾಯಾಲಯಕ್ಕೆ ಕರೆದೊಯ್ಯುವಾಗ ಆಗಬಹುದಾದ ಅಪಾಯಗಳ ಗಂಭೀರತೆಯನ್ನು ಅರಿತ ಬಿಹಾರ ಉಚ್ಚ ನ್ಯಾಯಾಲಯ ಈ ಎಲ್ಲ ಪ್ರಕರಣಗಳನ್ನು ವಿಚಾರಣೆ ಮಾಡುತ್ತಿದ್ದ ನ್ಯಾಯಾಲಯಗಳನ್ನು ಸಿವಾನ್ ಕೇಂದ್ರ ಕಾರಾಗೃಹಕ್ಕೆ ಸ್ಥಳಾಂತರ ಮಾಡಿತು.

ಈ ಕ್ರಮವನ್ನು ಆಪಾದಿತರ ಪರವಾಗಿ ಬಿಹಾರ ಉಚ್ಚ ನ್ಯಾಯಾಲಯದಲ್ಲಿ ನಂತರ ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಲಾಯಿತು.

ದಂಡ ಪ್ರಕ್ರಿಯಾ ಸಂಹಿತೆಯ ಸೆ. ೯(೬)ರ ವ್ಯಾಪ್ತಿಯನ್ನು ವಿಶ್ಲೇಷಿಸುತ್ತ ಸರ್ವೋಚ್ಚ ನ್ಯಾಯಾಲಯ ಈ ಕೆಳಕಂಡಂತೆ ಆಜ್ಞೆ ಮಾಡಿತು.

- ಈ ಆಜ್ಞೆ ನ್ಯಾಯಿಕ ಆಜ್ಞೆಯಲ್ಲ ಬದಲಾಗಿ ಆಡಳಿತಾತ್ಮಕ ಆಜ್ಞೆ.
- ಈ ಆಜ್ಞೆಯಂತೆ ಪ್ರಕರಣಗಳು ಒಂದರಿಂದ ಇನ್ನೊಂದು ನ್ಯಾಯಾಲಯಕ್ಕೆ ವರ್ಗಾವಣೆಗೊಂಡಂತಾಗುವುದಿಲ್ಲ. ಬದಲಾಗಿ ನ್ಯಾಯಾಲಯವೆ ಸ್ಥಳಾಂತರಗೊಂಡಂತಾಗುತ್ತದೆ.
- ನ್ಯಾಯಾಲಯ ಯಾವ ಜಾಗದಿಂದ ಕಾರ್ಯನಿರ್ವಹಿಸಬೇಕೆಂಬುದನ್ನು ಹೇಳುವ ಅಧಿಕಾರ ಆಪಾದಿತನಿಗಿಲ್ಲ.
- ಹಾಗಾಗಿ ಇಂಥ ಆಜ್ಞೆ ಮಾಡುವ ಮೊದಲು ಸಹಜ ನ್ಯಾಯ ಸಿದ್ಧಾಂತದಂತೆ ಆಪಾದಿತನನ್ನು ಆಲಿಸಬೇಕಾದ ಅವಶ್ಯಕತೆ ಇಲ್ಲ.

*(೨೦೧೦ ಎಐಆರ್ ಎಸ್‌ಸಿಡಬ್ಲ್ಯು ೩೨೧೧)*

### *ಹಿಂದೂ ವಿವಾಹ ಕಾಯ್ದೆ, ೧೯೫೫, ಸೆ. ೧೩(೧) (೧ಎ) 'ಹಿಂಸಾತ್ಮಕ ನಡುವಳಿಕೆ' ಎಂದರೇನು – ವ್ಯಾಖ್ಯಾನಿಸಲು ಸಾಧ್ಯವೆ?*

ಹಿಂದು ವಿವಾಹ ಕಾಯ್ದೆಯ ಸೆ. ೧೩(೧)(೧ಎ)ರಡಿಯಲ್ಲಿ ಪತಿ ಅಥವಾ ಪತ್ನಿಯ ಹಿಂಸಾತ್ಮಕ ನಡುವಳಿಕೆ ವಿವಾಹ ವಿಚ್ಛೇದನಕ್ಕೊಂದು ಕಾರಣ. ಆದರೆ ಕಾಯ್ದೆಯಲ್ಲಿ 'ಹಿಂಸಾತ್ಮಕ ನಡುವಳಿಕೆ' ಎಂದರೇನು ಎಂದು ಎಲ್ಲಿಯೂ ವ್ಯಾಖ್ಯೆಯಾಗಲಿ ವಿವರಣೆಯಾಗಲಿ ಇಲ್ಲ. ಹೀಗಾಗಿ ಸಮಸ್ಯೆ ಉದ್ಭವಿಸುವುದು ಎಂತಹ ನಡುವಳಿಕೆಯನ್ನು ಹಿಂಸಾತ್ಮಕ ನಡುವಳಿಕೆ ಎಂದು ಪರಿಗಣಿಸಬೇಕು ಎಂಬುದರಲ್ಲಿ. ಇಂಥ ಕ್ಲಿಷ್ಟಕರ ಪ್ರಕರಣವೊಂದು ಸರ್ವೋಚ್ಚ ನ್ಯಾಯಾಲಯದ ಮುಂದೆ ಬಂದಾಗ ವಿಚ್ಛೇದನ ಬಯಸಿದ ಪತಿ, ಪತ್ನಿ ತನ್ನನ್ನು ತೊರೆದು ಹೋಗಿರುವುದರಿಂದ ಅದು ಹಿಂಸಾತ್ಮಕ ನಡುವಳಿಕೆಯಾಗುತ್ತದೆಂದು ಪ್ರತಿಪಾದಿಸಿದರು.

ಆದರೆ ವಾಸ್ತವಾಂಶಗಳನ್ನು ಪರಾಂಬರಿಸಿದ ನ್ಯಾಯಾಲಯ ಪತಿ ಪತ್ನಿಯನ್ನು ಪ್ರತಿನಿತ್ಯ ಹೊಡೆಯುತ್ತಿದ್ದುದರಿಂದ ಪತ್ನಿ ಸಕಾರಣವಾಗಿ ಪತಿಯನ್ನು ತೊರೆದಿದ್ದಾರೆಂದು ಅಭಿಪ್ರಾಯಪಟ್ಟು ಪತಿಯ ವಿಚ್ಛೇದನದ ಕೋರಿಕೆಯನ್ನು ತಳ್ಳಿಹಾಕಿತು. ಮುಂದುವರಿದ ನ್ಯಾಯಾಲಯ ಹೇಳಿದ್ದೇನೆಂದರೆ,

- ವೈವಾಹಿಕ ಸಂಬಂಧಗಳಲ್ಲಿ 'ಹಿಂಸಾತ್ಮಕ ನಡುವಳಿಕೆ'ಯನ್ನು ವ್ಯಾಖ್ಯಾನಿಸಲು ಸಾಧ್ಯವಿಲ್ಲ. ಅದು ವ್ಯಾಖ್ಯೆಯನ್ನು ಮೀರಿದ್ದು. ಅದರ ವಿವರಣೆಯೂ ಸಂಪೂರ್ಣವಾಗಿ ಸಾಧ್ಯವಿಲ್ಲ.
- ಹೀಗಾಗಿ ಪೂರ್ವ ನಿರ್ಧರಿತ ಸೂತ್ರದನುಸಾರವಾಗಿ ಹಿಂಸಾತ್ಮಕ ನಡುವಳಿಕೆಯನ್ನು ತೀರ್ಮಾನಿಸಲು ಸಾಧ್ಯವಿಲ್ಲ.
- 'ಹಿಂಸಾತ್ಮಕ ನಡುವಳಿಕೆ' ಎಂದರೇನೆಂಬುದು ಆಯಾ ಪ್ರಕರಣದ ವಾಸ್ತವಾಂಶ ಮತ್ತು ಸಂದರ್ಭಕ್ಕನುಗುಣವಾಗಿ ತೀರ್ಮಾನಿಸಬೇಕು.

*(೨೦೧೦ ಎ.ಐ.ಆರ್. ಎಸ್.ಸಿ.ಡಬ್ಲ್ಯು ೧೫೬೪)*

---

## *Just* ಮಾತ್ ಮಾತಲ್ಲಿ...

### ಮಧ್ಯಸ್ಥಿಕೆ V/s ಪಂಚಾಯಿತಿ

ಮಧ್ಯಸ್ಥಿಕೆ ಭಾರತೀಯ ನ್ಯಾಯಾಂಗ ವ್ಯವಸ್ಥೆಯಲ್ಲಿ ಒಂದು ವಿನೂತನ ಪ್ರಯೋಗ. ಈ ಪರಿಕಲ್ಪನೆಯನ್ನು (concept) ನಾವು ಅಮೇರಿಕಾ ದೇಶದಿಂದ ಪಡೆದುಕೊಂಡಿದ್ದೇವೆ. ಮಧ್ಯಸ್ಥಿಕೆಯ ಬಗ್ಗೆ ನಾವು ಪ್ರಸ್ತಾಪ ಮಾಡಿದಾಗ ಜನಸಾಮಾನ್ಯರ ಪ್ರತಿಕ್ರಿಯೆ ಸಾಮಾನ್ಯವಾಗಿ ನಕಾರಾತ್ಮಕವಾಗಿರುತ್ತದೆ. "ಮಧ್ಯಸ್ಥಿಕೆಯಲ್ಲಿ ಹೊಸದು ಏನೂ ಇಲ್ಲ. ಇದು ನಮ್ಮ ಹಿಂದಿನ ಪಂಚಾಯಿತಿ ಕಟ್ಟೆಗೆ ಸಮಾನ ಮತ್ತು ಅದನ್ನೆ ಬೇರೆ ರೂಪದಲ್ಲಿ ಅಳವಡಿಸಲಾಗುತ್ತಿದೆ", ಎಂಬುದು ಜನಸಾಮಾನ್ಯರ ಅಭಿಪ್ರಾಯ.

ಹಾಗಾಗಿ ಮಧ್ಯಸ್ಥಿಕೆ ಮತ್ತು ಪಂಚಾಯಿತಿ ನಿರ್ಣಯ ಎರಡು ಪ್ರಕ್ರಿಯೆಗಳು ಒಂದೇ ಅಥವಾ ಏನಾದರೂ ವಿಭಿನ್ನತೆ ಇದೆಯೇ ಎನ್ನುವುದರ ಬಗ್ಗೆ ವಿಶ್ಲೇಷಣೆ ಅಗತ್ಯ.

ಪಂಚಾಯಿತಿ ನಿರ್ಣಯಗಳು ಸಾಮಾನ್ಯವಾಗಿ ಬಹಿರಂಗ ಪ್ರದೇಶದಲ್ಲಿ ನಡೆಯುತ್ತವೆ. ಅರಳಿ ಕಟ್ಟೆ ಸಮಾನ್ಯವಾಗಿ ಪಂಚಾಯಿತಿ ನಡೆಯುವ ಸ್ಥಳ. ಪಂಚಾಯಿತಿದಾರನ ಆಯ್ಕೆಯಲ್ಲಿ ಪಕ್ಷಗಾರರಿಗೆ ಅವಕಾಶವಿರುವುದಿಲ್ಲ. ಪಂಚಾಯಿತಿದಾರರು, ಹಿರಿಯರು ಅನುಭವಿದಾರರಾಗಿದ್ದರೂ ಸಹ ಅವರಿಗೆ ಕಾನೂನಿನ ಅರಿವು ಕಡಿಮೆ. ಪಂಚಾಯಿತಿ ನಿರ್ಣಯಕ್ಕೆ ಕಾನೂನಿನ ಮಾನ್ಯತೆ (Force of Law) ಇಲ್ಲ. ಹಾಗೂ ಇದನ್ನು ಜಾರಿಗೆ ತರಲು ಕಾನೂನಿನಲ್ಲಿ ಸಹಕಾರವಿಲ್ಲ.

> **ಪಂಚಾಯಿತಿ ನಿರ್ಣಯಕ್ಕೆ ಕಾನೂನಿನ ಮಾನ್ಯತೆ ಇಲ್ಲ. ಮಧ್ಯಸ್ಥಿಕೆದಾರರು ವಿಶೇಷ ನೈಪುಣ್ಯತೆ ಹೊಂದಿದ್ದು ವಿವಾದದ ಸಾಧಕ–ಬಾಧಕಗಳ ಬಗ್ಗೆ ಅರಿವು ಹೊಂದಿರುತ್ತಾರೆ.**



ಎಸ್.ಎನ್. ಪ್ರಶಾಂತ ಚಂದ್ರ,
snpchandra@gmail.com

ಒಂದುವೇಳೆ ಪಕ್ಷಗಾರರು ಪಂಚಾಯಿತಿ ನಿರ್ಣಯದ ಉಲ್ಲಂಘನೆ ಮಾಡಿದರೆ ಅಥವಾ ಅನುಮೋದಿಸದಿದ್ದರೆ, ಪಕ್ಷಗಾರರ ಮೇಲೆ ಯಾವ ರೀತಿಯ ಹಿಡಿತ ಸಹ ಇರುವುದಿಲ್ಲ. ಎಷ್ಟೋ ಬಾರಿ ಪಂಚಾಯಿತಿದಾರರು ತಮ್ಮ ವೈಯಕ್ತಿಕ ದ್ವೇಷ ಅಥವಾ ವೈಮನಸ್ಯದಿಂದ ಪಕ್ಷಗಾರರ ಮೇಲೆ ತಮ್ಮ ನಿಲುವನ್ನು, ಅಭಿಪ್ರಾಯವನ್ನು ಹೇರಿ ಪಕ್ಷಗಾರರನ್ನು ಒತ್ತಾಯಕ್ಕೆ ಸಿಲುಕಿಸುತ್ತಾರೆ. ಆದರೆ ಮಧ್ಯಸ್ಥಿಕೆಯಲ್ಲಿ ಪಕ್ಷಗಾರರು ಸ್ವ–ಇಚ್ಛೆಯಿಂದ ಮತ್ತು ನ್ಯಾಯಾಲಯದ ಆದೇಶದ ಮೂಲಕ ಭಾಗವಹಿಸುತ್ತಾರೆ. ಪಕ್ಷಗಾರರ ನಿರ್ಣಯವೇ ಅಂತಿಮವಾಗಿರುತ್ತದೆ. ಮಧ್ಯಸ್ಥಿಕೆ ಪ್ರಕ್ರಿಯೆಯು ಸಂಪೂರ್ಣ ಹಿಡಿತ ಪಕ್ಷಗಾರರಲ್ಲಿಯೇ ಇರುತ್ತದೆ. ತಮಗೆ ಆಸಕ್ತಿ ಇಲ್ಲದಿದ್ದರೆ ಅಥವಾ ತಮ್ಮ ಅನಿಸಿಕೆ ಅಥವಾ ಆಕಾಂಕ್ಷೆಯಂತೆ ನೆರವೇರದಿದ್ದರೆ ಯಾವುದೇ ಸಂದರ್ಭದಲ್ಲಿ ಪಕ್ಷಗಾರರು ಪ್ರಕ್ರಿಯೆಯಿಂದ ಹೊರಹೋಗುವಂತಹ ನಿಲುವನ್ನು ಅಥವಾ ಬದಲಾಯಿಸುವಂತಹ ಹಕ್ಕು ಅಥವಾ ಸ್ವಾತಂತ್ರ್ಯ ಅವರಿಗಿರುತ್ತದೆ.

ಮಧ್ಯಸ್ಥಿಕೆದಾರರು ಸಾಮಾನ್ಯವಾಗಿ ನ್ಯಾಯವಾದಿಗಳು, ನಿವೃತ್ತ ನ್ಯಾಯಾಧೀಶರಾಗಿದ್ದು ಇವರು ಮಧ್ಯಸ್ಥಿಕೆಯ ವಿಚಾರದಲ್ಲಿ ವಿಶೇಷ ತರಬೇತಿಯಿಂದ ನೈಪುಣ್ಯತೆ ಹೊಂದಿದ್ದು ಕಾನೂನಿನ ಅರಿವನ್ನು ಮನದಲ್ಲಿಟ್ಟುಕೊಂಡು ಪಕ್ಷಗಾರರ ನಡುವೆ ಇರುವ ವಿವಾದದ ಸಾಧಕ–ಬಾಧಕಗಳನ್ನು ಅರಿತುಕೊಂಡು ಪಕ್ಷಗಾರರಿಗೆ ಬೇಕಾದಂತಹ ನಿರ್ಧಾರವನ್ನು ಮತ್ತು ಅನಿಸಿಕೆಗಳನ್ನು ಮನಃಪೂರ್ವಕವಾಗಿ ಸಾಧಿಸಲು ಪ್ರಯತ್ನಿಸುತ್ತಾರೆ. ಮಧ್ಯಸ್ಥಿಕೆದಾರರು ತಮ್ಮ ಅಭಿಪ್ರಾಯವನ್ನಾಗಲೀ, ನಿರ್ಣಯವನ್ನಾಗಲೀ ಪಕ್ಷಗಾರರ ಮೇಲೆ ಹೇರುವುದಿಲ್ಲ. ಅಷ್ಟೇ ಅಲ್ಲ ಪಕ್ಷಗಾರರು ಕಂಡುಕೊಂಡಂತಹ ನಿರ್ಣಯಗಳನ್ನು ಬರವಣಿಗೆಗೆ ಒಳಪಡಿಸಿ ನ್ಯಾಯಾಲಯಕ್ಕೆ ಕಳುಹಿಸಲಾಗುವುದು. ಪಕ್ಷಗಾರರು ಮಾಡಿಕೊಂಡಂತಹ ನಿರ್ಣಯಗಳನ್ನು ಮತ್ತು ಒಡಂಬಡಿಕೆಗಳನ್ನು ನ್ಯಾಯಾಲಯವು ಪರಿಗಣಿಸಿ, ಅದಕ್ಕೆ ಕಾನೂನಿನ ಮಾನ್ಯತೆಯನ್ನು ಕೊಟ್ಟು ಡಿಕ್ರಿಯ ರೂಪದಲ್ಲಿ ಜಾರಿಗೆ ತರಲು ಅನುವು ಮಾಡಿಕೊಡುತ್ತದೆ. ಈ ರೀತಿ ಪಡೆದ ಡಿಕ್ರಿಯು ಅಂತಿಮವಾಗಿದ್ದು ಯಾವುದೇ ಪಕ್ಷಗಾರರು ಭವಿಷ್ಯತ್‌ನಲ್ಲಿ ಇದನ್ನು ಪ್ರಶ್ನಿಸಲು ಅವಕಾಶ ಇರುವುದಿಲ್ಲ.

ವಿಶೇಷವಾಗಿ, ಪಕ್ಷಗಾರರ ನಡುವಿನ ವ್ಯಾಜ್ಯದ ಮೂಲವಾದ ಸಂಘರ್ಷವನ್ನು ನಿರ್ಣಯ ಮಾಡಲು ಮಧ್ಯಸ್ಥಿಕೆಯಲ್ಲಿ ಹೆಚ್ಚಿನ ಅವಕಾಶವಿದೆ. ಈ ರೀತಿಯ ಇತ್ಯರ್ಥದಿಂದ ವ್ಯಾಜ್ಯಗಳು ಸುಲಭವಾಗಿ ತೀರ್ಮಾನವಾಗುವುದಲ್ಲದೇ ಪಕ್ಷಗಾರರ ನಡುವಿನ ಬಾಂಧವ್ಯ ವೃದ್ಧಿಯಾಗಲು ಅವಕಾಶ ಮಾಡಿಕೊಡುತ್ತದೆ. ಮಧ್ಯಸ್ಥಿಕೆಯಿಂದ ಸಂಪೂರ್ಣ ನೆಮ್ಮದಿ ಸಾಧ್ಯ ಎಂಬುದು ನನ್ನ ಖಚಿತ ಅಭಿಪ್ರಾಯ.

---

# ಟಿವಿ ವಾಹಿನಿಗಳಿಗೆ ಹೊಸ ಮಾರ್ಗದರ್ಶಿ ಸೂತ್ರ

## ಇದು ಸುದ್ದಿಯೇತರ ವಾಹಿನಿಗಳಿಗೆ ಮಾತ್ರ ಅನ್ವಯ

ಸುದ್ದಿಯೇತರ ಟಿ.ವಿ ವಾಹಿನಿಗಳಿಗಾಗಿ ಇಂಡಿಯನ್ ಬ್ರಾಡ್‌ಕಾಸ್ಟಿಂಗ್ ಫೌಂಡೇಷನ್ ಹೊಸ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಿದೆ. ಹೊಸ ಮಾರ್ಗದರ್ಶಿ ಸೂತ್ರಗಳನ್ವಯ ಸಿನಿಮಾಗಳಿಗೆ ಇರುವಂತೆ 'ವಯಸ್ಕ' ಮತ್ತು 'ಸಾಮಾನ್ಯ' ಎಂಬ ವರ್ಗೀಕರಣ ಟಿ.ವಿ ವಾಹಿನಿಗಳಿಗೂ ಅನ್ವಯಿಸಲಿದೆ.

ಮಾರ್ಗದರ್ಶಿ ಸೂತ್ರ ರೂಪಿಸಿರುವ ಫೌಂಡೇಶನ್ ಸರಕಾರವನ್ನು ಈ ಮಾರ್ಗದರ್ಶಿ ಸೂತ್ರಗಳನ್ನು ತಕ್ಷಣದಿಂದ ಅನ್ವಯಿಸುವಂತೆ ಜಾರಿಗೊಳಿಸಲು ಕೇಳಿಕೊಂಡಿದೆ. ಸರಕಾರ ಕೇಬಲ್ ನೆಟ್‌ವರ್ಕ್ (ರೆಗ್ಯುಲೇಶನ್) ಆ್ಯಕ್ಟ್ ೧೯೯೫ರಡಿ ಈ ಮಾರ್ಗದರ್ಶಿ ಸೂತ್ರಗಳ ಕಡ್ಡಾಯ ಪಾಲನೆಯನ್ನು ಜಾರಿಗೊಳಿಸಬಹುದು.

## ಗ್ರಾಮ ನ್ಯಾಯಾಲಯಕ್ಕೆ ದೊರೆಯದ ಚಾಲನೆ

### ಅನುದಾನದ ಕೊರತೆಯ ಕಾರಣ

೨೦೦೯ರ ಗಾಂಧಿ ಜಯಂತಿಯಂದಿನಿಂದ ಜಾರಿಗೆ ಬಂದು ಗ್ರಾಮ ನ್ಯಾಯಾಲಯಗಳನ್ನು ಸ್ಥಾಪಿಸಲು ಅನುವು ಮಾಡಿಕೊಡುವ ಕಾನೂನನ್ನು ಜಾರಿಗೊಳಿಸಲು ಹಲವು ರಾಜ್ಯ ಸರಕಾರಗಳು ಮೀನ-ಮೇಷ ಎಣಿಸುತ್ತಿವೆ. ಹಣಕಾಸಿನ ಕೊರತೆಯೆ ಈ ವಿಳಂಬಕ್ಕೆ ಕಾರಣವೆಂದು ಹೇಳಲಾಗುತ್ತಿದೆ.

ಗ್ರಾಮ ನ್ಯಾಯಾಲಯ ಸ್ಥಾಪನೆಯಾದರೆ ದೇಶದಾದ್ಯಂತ ಬಾಕಿ ಇರುವ ಸುಮಾರು ೩.೧೧ ಕೋಟಿ ಪ್ರಕರಣಗಳಿಗೆ ತಳ ಹಂತದಿಂದ ಮುಕ್ತಿ ಸಿಗಲು ನೆರವಾಗಲಿದೆ ಎಂದು ನಿರೀಕ್ಷಿಸಲಾಗಿದೆ. ನ್ಯಾಯಾಲಯಗಳ ಮೂಲ ಸೌಕರ್ಯ ಒದಗಿಸಲು ಕೇಂದ್ರ ಸರಕಾರ ಈಗಾಗಲೆ ರೂ. ೮,೦೦೦/- ಕೋಟಿಗಳನ್ನು ನೆರವಾಗಿ ನೀಡಲು ಒಪ್ಪಿದೆ. ಇದಲ್ಲದೆ ರಾಜ್ಯಗಳು ೧೩ನೆ ಆರ್ಥಿಕ ಕಮಿಷನ್ನಿನ ವರದಿಯಂತೆ ಈ ಉದ್ದೇಶಕ್ಕಾಗಿ ರೂ. ೫,೦೦೦/- ಕೋಟಿಗಳನ್ನು ಪಡೆಯಲಿವೆ.

## ಬೆಂಗಳೂರು ವಕೀಲರ ವಾಹನಗಳಿಗೆ ಗುರುತಿನ ಚೀಟಿ

### ಸ್ಮಾರ್ಟ್ ಕಾರ್ಡ್‌ನ ಹಲವು ಸಾಧ್ಯತೆಗಳು

ಬೆಂಗಳೂರು ವಕೀಲರ ಸಂಘವು ತನ್ನ ಸದಸ್ಯರ ವಾಹನಗಳಿಗೆ ಅಂಟಿಸುವ ಗುರುತಿನ ಚೀಟಿ ನೀಡಲು ನಿರ್ಧರಿಸಿದ್ದು, ಚೀಟಿ ಪಡೆಯಲು ಸದಸ್ಯರು ಸ್ಮಾರ್ಟ್ ಕಾರ್ಡ್, ವಾಹನ ಚಾಲನಾ ಪರವಾನಗಿ ಪತ್ರ ಮತ್ತು ವಾಹನದ ಆರ್.ಸಿ. ಪುಸ್ತಕದ ಫೋಟೋ ಪ್ರತಿಯೊಂದಿಗೆ ಅರ್ಜಿ ಸಲ್ಲಿಸಲು ಬೆಂ.ವ. ಸಂಘ ಕೋರಿದೆ.

ಗುರುತಿನ ಚೀಟಿಯಲ್ಲಿ ಸದಸ್ಯರ ಹೆಸರು, ಸ್ಮಾರ್ಟ್ ಕಾರ್ಡ್ ಸಂಖ್ಯೆ ಮತ್ತು ವಾಹನದ ರಿಜಿಸ್ಟ್ರೇಷನ್ ಸಂಖ್ಯೆ ಇರಲಿವೆ.

ದ್ವಿಚಕ್ರವಾಹನಗಳ ಗುರುತಿನ ಚೀಟಿಗೆ ಬೆಲೆ ರೂ. ೫೦\- ಮತ್ತು ನಾಲ್ಕು ಚಕ್ರವಾಹನಗಳ ಗುರುತಿನ ಚೀಟಿಗೆ ರೂ. ೧೦೦\- ನಿಗದಿ ಮಾಡಲಾಗಿದೆಯೆಂದು ಬೆಂ.ವ. ಸಂಘದ ಪ್ರಕಟಣೆ ತಿಳಿಸಿದೆ.

ಈ ಗುರುತಿನ ಚೀಟಿಯಿಂದ ಸಂಘದ ಸದಸ್ಯರ ವಾಹನಗಳಿಗಾಗಿ ಪಾರ್ಕಿಂಗ್ ಜಾಗ ಕಾಯ್ದಿರಿಸಲು ಅನುಕೂಲವಾಗಲಿವೆ.

ಸಂಘ ತನ್ನ ಸದಸ್ಯರಿಗಾಗಿ ಸ್ಮಾರ್ಟ್ ಕಾರ್ಡ್‌ನ್ನು ಬಳಕೆಗೆ ತಂದಾಗ, ಸಂವಾದ ಇಂತಹ ಸಾಧ್ಯತೆಗಳ ಬಗ್ಗೆ ಬರೆದಿತ್ತು. ನೋಡಿ, ಸಂವಾದ ಜೂನ್ ೨೦೦೯.

## ಪುನರ್ವಿಂಗಡಣಾ ಕಮಿಷನ್ನಿನ ವರದಿಯಂತೆ ಗಡಿ ರೇಖೆ

### ಕೇಂದ್ರದ ನಿಲುವು ಸ್ಪಷ್ಟ

ಮಹಾರಾಷ್ಟ್ರ ಸರಕಾರ ಸರ್ವೋಚ್ಚ ನ್ಯಾಯಾಲಯದಲ್ಲಿ ಕರ್ನಾಟಕ ಮತ್ತು ಕೇಂದ್ರ ಸರ್ಕಾರಗಳನ್ನು ಪ್ರತಿವಾದಿಗಳಾಗಿ ಮಾಡಿ ಹೂಡಿರುವ ದಾವೆಯಲ್ಲಿ ಕೇಂದ್ರ ಸರಕಾರ ತನ್ನ ಆಕ್ಷೇಪಣಾ ಪತ್ರ ಸಲ್ಲಿಸಿ, ಕರ್ನಾಟಕ ಮತ್ತು ಮಹಾರಾಷ್ಟ್ರದ ಮಧ್ಯದ ಗಡಿ ರೇಖೆ ಈಗಿರುವಂತೆಯೆ ಇರಲಿ ಎಂದಿದೆ.

ಮಹಾರಾಷ್ಟ್ರ ತನ್ನ ದಾವೆಯಲ್ಲಿ ಬೆಳಗಾವಿ, ಗುಲ್ಬರ್ಗಾ, ಕಾರವಾರ ಅಲ್ಲದೆ ಕರ್ನಾಟಕದ ಒಟ್ಟು ೮೬೫ ಹಳ್ಳಿಗಳನ್ನು ತನಗೆ ಹಸ್ತಾಂತರಿಸಲು ಕೇಳಿದೆ.

೧೯೫೬ರಲ್ಲಿ ರಾಜ್ಯ ಪುನರ್ವಿಂಗಡಣಾ ಕಮಿಷನ್ನಿನ ವರದಿಯಂತೆ ಎಳೆದ ಗಡಿ ರೇಖೆಯಿಂದ ಸಮಾಧಾನವಾಗದ ಮಹಾರಾಷ್ಟ್ರದ ಕೋರಿಕೆಯಂತೆ, ನ್ಯಾ॥ ಮೆಹೆರ್‌ಚಂದ ಮಹಾಜನ್ ಕಮಿಷನ್ನನ್ನು ನೇಮಿಸಿ ಗಡಿ ರೇಖೆಯನ್ನು ಪುನರ್ಪರಿಶೀಲಿಸಲು ಕೇಳಲಾಗಿತ್ತು. ಆದರೆ ಮಹಾಜನ್ ವರದಿಯೂ ರಾಜ್ಯ ಪುನರ್ವಿಂಗಡಣಾ ಕಮಿಷನ್ನಿನ ನಿಲುವನ್ನು ಹೆಚ್ಚು ಕಡಿಮೆ ಅನುಮೋದಿಸಿತ್ತು.

ಈ ಪ್ರದೇಶಗಳಲ್ಲಿ ಮರಾಠಿ ಭಾಷಿಕರು ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ಈ ಪ್ರದೇಶಗಳು ತನಗೆ ಸೇರಬೇಕೆಂದು ಮಹಾರಾಷ್ಟ್ರದ ನಿಲುವಾಗಿದೆ. ಕೇಂದ್ರ ತನ್ನ ಆಕ್ಷೇಪಣೆಯಲ್ಲಿ 'ಗಡಿ ರೇಖೆಯನ್ನು ಐತಿಹಾಸಿಕ, ಸಾಮಾಜಿಕ, ಭೌಗೋಳಿಕ ಹೀಗೆ ಹಲವಾರು ಕಾರಣಗಳಿಂದ ನಿರ್ಧಾರ ಮಾಡಿದ್ದು ಭಾಷೆ ಅವುಗಳಲ್ಲಿ ಒಂದು ಅಂಶವಷ್ಟೆ, ಅದೆ ಅಂತಿಮ ತೀರ್ಮಾನಕ್ಕೆ ಕಾರಣವಲ್ಲ' ಎಂದಿದೆ.

## ಶಸ್ತ್ರ ಕಾಯ್ದೆ, ೧೯೫೯ ತಿದ್ದುಪಡಿ ಸನ್ನಿಹಿತ

### ಕಾನೂನು ಬಿಗಿಗೊಳಿಸುವ ಉದ್ದೇಶ

ಶಸ್ತ್ರ ಕಾಯ್ದೆ (Arms Act) ೧೯೫೯ಕ್ಕೆ ತಿದ್ದುಪಡಿ ಮಾಡಿ ಕಾಯ್ದೆಯನ್ನು ಇನ್ನೂ ಬಿಗಿಗೊಳಿಸುವ ಕಾಲ ಕೂಡಿ ಬಂದಂತಿದೆ. ಜುಲೈ ತಿಂಗಳಲ್ಲಿ ಪ್ರಧಾನಿ ಮನಮೋಹನ ಸಿಂಘ್ ಅಧ್ಯಕ್ಷತೆ ವಹಿಸಿದ್ದ ಸಚಿವ ಸಂಪುಟದ ಸಭೆಯಲ್ಲಿ ಶಸ್ತ್ರ ಕಾಯ್ದೆಯನ್ನು ತಿದ್ದುಪಡಿ ಮಾಡುವ ತೀರ್ಮಾನ ತೆಗೆದುಕೊಳ್ಳಲಾಗಿದೆ. ಸಚಿವ ಸಂಪುಟ ಶಸ್ತ್ರ (ತಿದ್ದುಪಡಿ) ಬಿಲ್, ೨೦೧೦ನ್ನು ಅಂಗೀಕರಿಸಿದೆ. ಈಗ ಬಿಲ್ ಲೋಕಸಭೆಯ ಮುಂದೆ ಬರಲಿದೆ.

## ಅನಿವಾಸಿ ಭಾರತೀಯರಿಗೆ ಮತದ ಹಕ್ಕು : ಮೊಯಿಲಿ

### ಭಾರತಕ್ಕೆ ಬಂದು ಮತ ಚಲಾವಣೆ ಅವಕಾಶ

ನಿರ್ದಿಷ್ಟ ರೀತಿಯ ಅನಿವಾಸಿ ಭಾರತೀಯರಿಗೆ ಭಾರತದ ಚುನಾವಣೆಗಳಲ್ಲಿ ಮತ ಚಲಾವಣೆಯ ಹಕ್ಕು ಸಧ್ಯದಲ್ಲಿಯೇ ಲಭ್ಯವಾಗಲಿದೆ.

ಇಂಗ್ಲೆಂಡಿನ ಅನಿವಾಸಿ ಭಾರತೀಯರ ಸಂಘ, ಇಂಡಿಯನ್ ಓವರ್‌ಸೀಸ್ ಕಾಂಗ್ರೆಸ್(ಯು.ಕೆ)ನ ಸದಸ್ಯರನ್ನು ಉದ್ದೇಶಿಸಿ ಮಾತನಾಡುತ್ತ ಕೇಂದ್ರ ಕಾನೂನು ಮಂತ್ರಿ, ಮೊಯಿಲಿ ಭಾರತದಲ್ಲಿ ವಿಳಾಸ ಹೊಂದಿರುವ ಅನಿವಾಸಿ ಭಾರತೀಯರಿಗೆ ಇಲ್ಲಿನ ಚುನಾವಣೆಯಲ್ಲಿ ಮತ ಚಲಾಯಿಸಲು ಸೂಕ್ತ ಕಾನೂನು ರೂಪಿಸಲಾಗುವುದು ಎಂದಿದ್ದಾರೆ.

ಭಾರತದ ಪೌರತ್ವ ತೊರೆದು ವಿದೇಶಿ ಪೌರತ್ವವನ್ನು ಹೊಂದಿರುವ ಅನಿವಾಸಿ ಭಾರತೀಯರಿಗೆ ಈ ಸೌಲಭ್ಯ ಸಿಗುವ ಸಾಧ್ಯತೆಗಳಿಲ್ಲ.

## ವಕೀಲರ ಕಲ್ಯಾಣ ನಿಧಿ ಕಾಯ್ದೆಗೆ ತಿದ್ದುಪಡಿ

### ಯುವ ವಕೀಲರ ಆಕ್ರೋಶ

ಕರ್ನಾಟಕ ಶಾಸನ ಸಭೆಯಲ್ಲಿ ದಿನಾಂಕ: ೧೬-೦೭-೨೦೧೦ರಂದು ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕ, ೨೦೧೦ ಅಂಗೀಕಾರವಾಗಿದ್ದು, ಕಲ್ಯಾಣ ನಿಧಿಯ ಮೊತ್ತವನ್ನೇನೋ ಹೆಚ್ಚಿಸಲಾಗಿದೆ. ಆದರೆ ಸಂಬಂಧಿಸಿದ ಕಾನೂನಿನ ಕ್ರಮಗಳನ್ನು ಬಿಗಿಗೊಳಿಸಲಾಗಿದೆ. ಈ ಕಠಿಣ ಕ್ರಮಗಳಿಂದ ಯುವ ವಕೀಲರಿಗೆ ಹೆಚ್ಚಾಗಿ ಹೊಡೆತ ಬೀಳುವುದರಿಂದ ಯುವ ವಕೀಲರ ಸಮುದಾಯದಿಂದ ತಿದ್ದುಪಡಿಗೆ ತೀವ್ರ ಪ್ರತಿರೋಧ ವ್ಯಕ್ತವಾಗಿದೆ.

**ಈ ತಿದ್ದುಪಡಿಯಂತೆ**

- ವೃತ್ತಿಯನ್ನು ಐದು ವರ್ಷಗಳು ಪೂರ್ಣಗೊಳಿಸಿದ ವಕೀಲರಿಗೆ ಮಾತ್ರ ವಿಮಾ ಸೌಲಭ್ಯ.
- ಯಾವುದೇ ವರ್ಷದ ಡಿಸೆಂಬರ್ ೩೧ರ ಒಳಗಾಗಿ ವಕೀಲರು ವಿಮಾ ಹಣ ಪಾವತಿಸದಿದ್ದರೆ ಅಂಥವರು ವೃತ್ತಿಯನ್ನು ನಿಲ್ಲಿಸಿದ್ದಾರೆಂದು ಭಾವಿಸಿ ಈ ಕಾನೂನಿನ ಸೌಲಭ್ಯಗಳನ್ನು ನಿರಾಕರಿಸಲಾಗುವುದು.
- ವಿಮಾ ಹಣದ ಮೊತ್ತವನ್ನು ತೀರ್ಮಾನಿಸಲು ವಕೀಲರ ಸೇವಾವಧಿಯನ್ನು ಮಾನದಂಡವಾಗಿಸಿದ್ದು, ವಿವಿಧ ಸೇವಾವಧಿಗೆ ವಿವಿಧ ಹಂತಗಳನ್ನು ನಿಗದಿಪಡಿಸಲಾಗಿದೆ.

## ನಮ್ಮ ಕಾರ್ಯ ವ್ಯಾಪ್ತಿ ಕಾಶ್ಮೀರಕ್ಕೂ ವಿಸ್ತರಿಸಲಿ : ಕೆ.ಜಿ. ಬಾಲಕೃಷ್ಣನ್

ರಾಷ್ಟ್ರೀಯ ಮಾನವ ಹಕ್ಕುಗಳ ಕಮಿಷನ್ನಿನ ಅಧ್ಯಕ್ಷ, ನ್ಯಾ॥ ಕೆ.ಜಿ. ಬಾಲಕೃಷ್ಣನ್, ಕಮಿಷನ್ನಿಗೆ ಕಾಶ್ಮೀರ ಕಣಿವೆಯ ವಿಷಯದಲ್ಲಿ ಸಂಪೂರ್ಣ ಅಧಿಕಾರ ವ್ಯಾಪ್ತಿ ಇಲ್ಲದ ಬಗ್ಗೆ ಅಸಮಾಧಾನ ಸೂಚಿಸಿದ್ದಾರೆ.

"ಜಮ್ಮು ಕಾಶ್ಮೀರ ಭಾರತದ ಅಂಗ. ಕಮಿಷನ್ನಿಗೆ ಈ ಪ್ರದೇಶಗಳ ವಿಷಯದಲ್ಲಿಯೂ ಅಧಿಕಾರ ವ್ಯಾಪ್ತಿ ಇರಲಿ. ಅದು ಅಲ್ಲಿನ ಜನರಿಗೆ ಉಪಯುಕ್ತವಾಗಲಿದೆ," ಎಂದಿದ್ದಾರೆ.

ಈಗಿರುವಂತೆ ರಾಷ್ಟ್ರೀಯ ಮಾನವ ಹಕ್ಕುಗಳ ಕಮಿಷನ್ನಿಗೆ ಜಮ್ಮು-ಕಾಶ್ಮೀರದ ವಿಷಯದಲ್ಲಿ ದೇಶದ ಉಳಿದ ಭಾಗಕ್ಕಿದ್ದಂತೆ ಸಂಪೂರ್ಣ ಕಾರ್ಯವ್ಯಾಪ್ತಿ ಇಲ್ಲ. ಈ ಪ್ರದೇಶದಲ್ಲಿ ಕಮಿಷನ್, ಭಾರತದ ಸಂವಿಧಾನದ ರಾಜ್ಯದ ಪಟ್ಟಿ (State List) ಯಲ್ಲಿನ ವಿಷಯಗಳಿಗೆ ಸಂಬಂಧಿಸಿದಂತೆ ಅಧಿಕಾರ ವ್ಯಾಪ್ತಿ ಇಲ್ಲ. ಕಮಿಷನ್ Union List ಮತ್ತು Concurrent List ವಿಷಯಗಳಲ್ಲಿ ಮಾತ್ರ ಅಧಿಕಾರ ವ್ಯಾಪ್ತಿ ಹೊಂದಿದೆ.



## ವಿದೇಶ ಪ್ರವಾಸ



೨೭.೦೬.೨೦೧೦ ರಂದು ವಿ.ಎಸ್. ಪ್ರಸಾದ್, ವಕೀಲರು, ಕುಟುಂಬದೊಂದಿಗೆ ಆರು ವಾರಗಳ ಯುರೋಪ್ ಪ್ರವಾಸ ಮುಗಿಸಿ ಬೆಂಗಳೂರಿಗೆ ಹಿಂತಿರುಗಿದರು.

೧೯.೦೭.೨೦೧೦ ರಂದು ಜಿ.ಎಸ್. ನಟರಾಜನ್, ವಕೀಲರು, ಐದು ವಾರಗಳ ಕೆನಡಾ ಪ್ರವಾಸಕ್ಕಾಗಿ ಕುಟುಂಬದೊಂದಿಗೆ ಬೆಂಗಳೂರಿನಿಂದ ತೆರಳಿದರು.

೨೪.೦೭.೨೦೧೦ ರಂದು ಎಚ್.ಎನ್. ನಂಜುಂಡಯ್ಯ, ವಕೀಲರು, ಮೂರು ವಾರಗಳ ಯು.ಎಸ್.ಎ ಪ್ರವಾಸಕ್ಕಾಗಿ ಕುಟುಂಬದೊಂದಿಗೆ ಬೆಂಗಳೂರಿನಿಂದ ತೆರಳಿದರು.

*(ನಮ್ಮ ಓದುಗರ ಕೋರಿಕೆಯಂತೆ ಈ ಅಂಕಣವನ್ನು ಪುನರಾರಂಭಿಸಲಾಗಿದೆ. ವಿದೇಶ ಪ್ರವಾಸ ಕೈಗೊಂಡ ವಕೀಲ-ಓದುಗರು ವಿವರಗಳನ್ನು ಸಂಪಾದಕರಿಗೆ ನೇರವಾಗಿ ತಿಳಿಸಲು ಕೋರಿದೆ. -ಸಂ.)*

ಪ್ರಕಾಶಕರು : ಎಸ್. ಎನ್. ಪ್ರಶಾಂತಚಂದ್ರ, ಲಹರಿ ವಕೀಲರ ವೇದಿಕೆ, ನಂ. ೨೯೮೦, 'ಲಕ್ಷ್ಮೀದೀಪ', ೧೭ನೇ ಅಡ್ಡರಸ್ತೆ, ಬನಶಂಕರಿ ೨ನೇ ಹಂತ, ಬೆಂಗಳೂರು-೫೬೦ ೦೭೦
ಮುದ್ರಣ : ವೀ ಕೇ ಪ್ರಿಂಟರ್ಸ್ & ಪಬ್ಲಿಷರ್ಸ್, ನಂ. ೩೬, ಊಳಿಗಾ ಕಾಂಪ್ಲೆಕ್ಸ್, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-೫೬೦ ೦೦೩ ಸಂಪರ್ಕಿಸಿ : aravindneglur@gmail.com
KARBIL 01707 / 10 /1/2009-TC MAG/(2)/LR/PRB/70/10-11 ಸಂಪಾದಕರು : ಅರವಿಂದ ಎಂ. ನೆಗಳೂರ